MAG(2)/CR/PRB/28/11-12

# ಪ್ರತಿಭಾ ಕುಸುಮ

PRATHIBHA KUSUMA

ಕನ್ನಡ ತ್ರೈಮಾಸಿಕ

KANNADA QUARTERLY

Estd. : 2012

ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ (ರಿ)

ಸಿ.ಎಸ್. ನಂ. 2, ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560 009

Mobile: 94806 44655 | E-mail:akavmms@gmail.com | www.akavmms.com

| Volume : 9 | October - November - December : 2024 | Rs : 5.00 | Page : 36 | Issue : 1 |
|---|---|---|---|---|
| ಸಂಪುಟ : 9 | ಅಕ್ಟೋಬರ್–ನವೆಂಬರ್–ಡಿಸೆಂಬರ್ 2024 | ರೂ : 5.00 | ಪುಟಗಳು : 36 | ಸಂಚಿಕೆ : 1 |






ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ (ರಿ)

ಸಿ.ಎಸ್. ನಂ. 2, ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560 009

# 43ನೇ ವರ್ಷದ ರಾಜ್ಯಮಟ್ಟದ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆ



















# ಅಧ್ಯಕ್ಷರ ನುಡಿ

**"ಎದ್ದೇಳಲು ನಿರ್ಧರಿಸಿದ ಮಹಿಳೆಗಿಂತ ಹೆಚ್ಚು ಶಕ್ತಿಶಾಲಿಯಾದುದು ಯಾವುದೂ ಇಲ್ಲ."**

"ಹೊಸ ಹಾದಿಯಲಿ
ಜೊತೆಯಾಗಿ ಸಾಗೋಣ"

ಈ ಮಾತು ಕೇಳಿದಾಗೆಲ್ಲಾ ನನಗೆ ರೋಮಾಂಚನವಾಗುತ್ತದೆ. ಒಬ್ಬ ಸ್ವಾಭಿಮಾನಿ ಮಹಿಳೆಗೇ ಅಷ್ಟು ಶಕ್ತಿಯಿರುವಾಗ ಇನ್ನು ಅಂತಹ ಮಹಿಳೆಯರ ಬೃಹತ್ ಸಮೂಹಕ್ಕೆ ಇನ್ನೆಷ್ಟು ಶಕ್ತಿಯಿರಬೇಡ!! ನಿಜ, ಹಾಗಾಗಿಯೇ ನಮ್ಮ "ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ"ದ ಬಗ್ಗೆ ಅಗಾಧವಾದ ಹೆಮ್ಮೆಯನ್ನು ಹೊಂದಿದ್ದೇನೆ. ಈ ಅಪೂರ್ವವಾದ ಮಹಿಳಾ ಮಹಾಸಭಾದ ರಾಜ್ಯಾಧ್ಯಕ್ಷೆಯಾಗಿ ಆಯ್ಕೆಯಾಗಿರುವುದು ಅಪಾರವಾದ ಸಂತೋಷವನ್ನು ನೀಡಿದೆ. ಹಾಗೆಯೇ ಬಹುದೊಡ್ಡ ಜವಾಬ್ದಾರಿಯೂ ನನ್ನ ಮೇಲಿದೆ. "ನಾನಿದನ್ನು ಸಮರ್ಥವಾಗಿ ನಿಭಾಯಿಸಬಲ್ಲೆನಾ", ಎಂಬ ಪ್ರಶ್ನೆಯು ನನ್ನಲ್ಲಿ ಅನೇಕ ಬಾರಿ ಮೂಡಿರುವುದೂ ಸತ್ಯ. ಆ ಪ್ರಶ್ನೆ ಮೂಡಿದಾಗೆಲ್ಲಾ ರಾಜ್ಯಾದ್ಯಂತ ಇರುವ ಮಹಿಳಾ ಮಹಾಸಭಾದ ಸದಸ್ಯೆಯರೆಲ್ಲರ ವದನಾರವಿಂದಗಳು ಕಣ್ಣೆದರು ಬರುತ್ತವೆ. ಆಗ ತಟ್ಟನೆ ನನ್ನ ಶಕ್ತಿ ನೂರ್ಮಡಿಯಾದಂತೆ ಭಾಸವಾಗುತ್ತದೆ. ಇಷ್ಟೊಂದು ಶಕ್ತಿದೇವತೆಗಳು ನನ್ನ ಜೊತೆಗಿರುವಾಗ ನನಗೇನು ಭಯ... ಧೈರ್ಯದಿಂದ ಮುನ್ನಡೆಯಬಲ್ಲೆ ಎಂಬ ಆತ್ಮವಿಶ್ವಾಸ ಮೂಡುತ್ತದೆ. ನನ್ನಲ್ಲಿ ಅನೇಕ ಕನಸುಗಳಿವೆ. ನಮ್ಮ ಸಮಾಜದ ಮಹಿಳೆಯರಿಗಾಗಿ ಗಣನೀಯವಾದ ಕಾರ್ಯಗಳನ್ನು ಮಾಡುವ ತುಡಿತವಿದೆ. ಅದೃಷ್ಟವೆಂಬಂತೆ ಅತ್ಯುತ್ತಮ ಸಮಿತಿ ನನ್ನ ಕನಸುಗಳಿಗೆ ಹೆಗಲಾಗಿ ನಿಂತಿದೆ. ರಾಜ್ಯಾದ್ಯಂತ ಇರುವ ಎಲ್ಲಾ ಸದಸ್ಯೆಯರ ತುಂಬು ಮನಸಿನ ಬೆಂಬಲವಿದೆ. ಅದೇ ನನಗೆ ಶ್ರೀರಕ್ಷೆಯಾಗಿದೆ. ನನ್ನ ಅವಧಿಯ ಮೊಟ್ಟ ಮೊದಲ ಕಾರ್ಯಕ್ರಮವಾದ "ಅಮ್ಮನವರಿಗೆ ಲಕ್ಷ ಬಳೆಗಳ ಪೂಜಾ ಕಾರ್ಯಕ್ರಮ" ಎಲ್ಲರ ಸಹಕಾರದಿಂದ ಅತ್ಯಂತ ಯಶಸ್ವಿಯಾಗಿ ನೆರವೇರಿ, ನಮ್ಮ ಮುಂದಿನ ಹಾದಿಗೆ ಸುಂದರವಾದ ಮುನ್ನುಡಿಯನ್ನು ಬರೆದಿದೆ. ವಾಸವಿ ಮಾತೆಯ ಅಭಯ ಹಸ್ತದ ಆಶೀರ್ವಾದ ನಮಗೆಲ್ಲಾ ಸಂಪೂರ್ಣವಾಗಿ ಲಭಿಸಿದೆ ಎಂದೇ ಭಾವಿಸುತ್ತೇನೆ.

ಇಂದು ನಾವು ಆಧುನಿಕ ಕಾಲದಲ್ಲಿದ್ದೇವೆ. ನಾವೆಷ್ಟೇ ಸಾಧಿಸಿದ್ದೇವೆ ಎಂದುಕೊಂಡರೂ ಸಾಧಿಸಬೇಕಾದ್ದು ಸಾಕಷ್ಟಿದೆ. ನಮ್ಮ ಜನಾಂಗದ ಮಹಿಳೆಯರ ಸರ್ವತೋಮುಖ. ನಾವೆಲ್ಲರೂ ಶ್ರಮಿಸೋಣ. ಇನ್ನೂ ಸಹ ಅನೇಕ ಹೆಣ್ಣುಮಕ್ಕಳಿಗೆ ಶಿಕ್ಷಣದ, ಉದ್ಯೋಗದ ಅವಶ್ಯಕತೆಯಿದೆ... ಆರೋಗ್ಯದ ಸಮಸ್ಯೆಗಳಿವೆ... ಎಲ್ಲಕ್ಕಿಂತ ಹೆಚ್ಚಿಗೆ ಎಷ್ಟೋ ಮಹಿಳೆಯರಿಗೆ ತಮ್ಮ ಅಸ್ತಿತ್ವದ ಹೋರಾಟವಿದೆ. ಅಂತಹವರ ನೆರವಿಗೆ ಪ್ರಯತ್ನಿಸೋಣ. ಈ ಎಲ್ಲಾ ಕೆಲಸಗಳ ಜೊತೆಗೆ ಹಾಡು, ಹಸೆ, ಭಜನೆ, ಪೂಜೆ, ಪ್ರವಾಸ, ನೃತ್ಯ, ಚಿಂತನೆ... ಈ ಎಲ್ಲಾ ದೈವಿಕ, ಸಾಂಸ್ಕೃತಿಕ, ಉಲ್ಲಾಸದ ಕ್ಷಣಗಳೂ ಬೆಸಗೊಂಡಿರಲಿ. ಜೀವನವೆಂದರೇನೇ ಹಾಗಲ್ಲವೇ....ನಲಿವು–ಶ್ರಮಗಳ ಸಂಗಮ!

ಈತನ ಆಧುನಿಕ ಯುಗದ ಮಹಿಳೆಯರಷ್ಟೇ ಅಲ್ಲ...ನಮ್ಮ ಭಾರತೀಯ ಪುರಾಣಗಳಲ್ಲಿ ಉಲ್ಲೇಖಿಸಿರುವ ಮಹಿಳೆಯರೂ ಕೇವಲ ಕಥೆಗಳಲ್ಲಿ ಪಾತ್ರಗಳಾಗಿಲ್ಲ! ಅವರು ಶಕ್ತಿಶಾಲಿ, ಬಹುಮುಖಿ ವನಿತೆಯರು, ಅವರು ಇಂದಿಗೂ ನಮಗೆ ಪ್ರತಿಕ್ಷಣಗಳಲ್ಲೂ ಸ್ಫೂರ್ತಿ ನೀಡುತ್ತಿದ್ದಾರೆ... ಮಾದರಿಯಾಗಿದ್ದಾರೆ. ಕುಂತಿ, ಗಾಂಧಾರಿ, ಸೀತೆ, ದ್ರೌಪದಿ, ಊರ್ಮಿಳಾ, ಸಾವಿತ್ರಿ, ಮಂಡೋದರಿ ಮತ್ತು ಹಿಡಿಂಬೆ ಮುಂತಾದ ಅನೇಕ ಸ್ತ್ರೀಯರು ಸಮಯ ಮತ್ತು ಲಿಂಗದ ಗಡಿಗಳನ್ನು ಮೀರಿದ ತ್ಯಾಗ, ಸ್ಥಿತಿಸ್ಥಾಪಕತ್ವ, ಭಕ್ತಿ ಮತ್ತು ಶಕ್ತಿಯಂತಹ ಗುಣಗಳನ್ನು ಉದಾಹರಿಸುತ್ತಾರೆ. ಅವರ ಧೀಶಕ್ತಿ ಅದ್ಭುತ ಸಾಕ್ಷಿಗಳಾಗಿ ನಿಂತಿವೆ. ಅವರ ಕಥೆಗಳು ಮಹಿಳೆಯರು ತಮ್ಮ ಅಂತರಂಗದಲ್ಲಿ ಹೊಂದಿರುವ ಶಕ್ತಿ ಮತ್ತು ನಿರ್ಣಯದ ಟೈಮ್‌ಲೆಸ್ ಉದಾಹರಣೆಗಳಾಗಿ ಕಾರ್ಯನಿರ್ವಹಿಸುತ್ತವೆ. ನಮ್ಮ ಸ್ವಂತ ಆಂತರಿಕ ಶಕ್ತಿಯನ್ನು ಅಳವಡಿಸಿಕೊಳ್ಳಲು ಮತ್ತು ನಮ್ಮ ಜೀವನದ ಎಲ್ಲಾ ಅಂಶಗಳಲ್ಲಿ ಶ್ರೇಷ್ಠತೆಗಾಗಿ ಶ್ರಮಿಸುವಂತೆ ಪ್ರೇರೇಪಿಸುತ್ತವೆ. ಭಾರತೀಯ ಪುರಾಣದ ಈ ಪೌರಾಣಿಕ ಮಹಿಳೆಯರು ಕೇವಲ ಗತಕಾಲದ ಅವಶೇಷಗಳಲ್ಲ. ಅವರು ಎಲ್ಲಾ ಕಾಲಕ್ಕೂ ಹಾಗೂ ಎಲ್ಲಾ ಮಹಿಳೆಯರಿಗೂ ಸಬಲೀಕರಣದ ನಿರಂತರ ಸಂಕೇತಗಳಾಗಿದ್ದಾರೆ.

ಯಾವಾಗಲೂ ಪ್ರತಿಯೊಬ್ಬ ಮಹಿಳೆಯ ಯಶಸ್ಸು ಮತ್ತೊಬ್ಬರಿಗೆ ಸ್ಫೂರ್ತಿಯಾಗಿರಬೇಕು. ನಾವು ಪರಸ್ಪರ ಹುರಿದುಂಬಿಸಿದಾಗ ಹಾಗೂ ಪರಸ್ಪರ ಬೆಂಬಲಿಸಿಕೊಂಡಾಗ ನಾವು ಇನ್ನಷ್ಟು ಬಲಶಾಲಿಗಳಾಗುತ್ತೇವೆ. ಈ ಮಾತು ಎಷ್ಟೊಂದು ಅರ್ಥಗರ್ಭಿತವಾಗಿದೆಯಲ್ಲವೇ? ನಮ್ಮ ಮಹಿಳಾ ಮಹಾಸಭಾದಲ್ಲಿ ಅಂತಹುದೊಂದು ಅಪೂರ್ವ ಶಕ್ತಿಯಡಗಿದೆ. ಅದನ್ನು ನಾವು ಕಾರ್ಯೋನ್ಮುಖಗೊಳಿಸಬೇಕಿದೆ. ಈ ದಿಶೆಯಲ್ಲಿ ಸಹೃದಯರೆಲ್ಲರ ಸಹಕಾರವಿದೆಯೆಂದು ಆಶಿಸುವೆ. ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ ಇದುವರೆಗೂ ಸಾರ್ಥಕವಾಗಿ ಕಾಯನಿರ್ವಹಿಸುತ್ತಾ ಬಂದಿದೆ. ಎಲ್ಲಾ ಆಯಾಮಗಳಲ್ಲೂ ಸಮರ್ಪಕವಾಗಿ ಯಶಸ್ಸು ಸಾಧಿಸಿದೆ. ಹಿಂದಿನ ಎಲ್ಲಾ ರಾಜ್ಯಾಧ್ಯಕ್ಷೆಯರನ್ನೂ ಈ ಸಮಯದಲ್ಲಿ ಪ್ರೀತಿಯಿಂದ ಸ್ಮರಿಸುತ್ತೇನೆ. ಅಂತೆಯೇ ನಮ್ಮ ಮುಂದಿರುವ ಹಾದಿಯೂ ತುಂಬಾ ದೊಡ್ಡದಿದೆ. ನಾವೆಲ್ಲಾ ಕೈ ಹಿಡಿದು ಒಟ್ಟಾಗಿ ಹೆಜ್ಜೆಯಿಡುತ್ತಾ ಸಾಗಿದರೆ ಗಮ್ಯವನ್ನು ತಲುಪಬಹುದು.... ಆ ಭರವಸೆ ನನಗಿದೆ. ನಿಮ್ಮೆಲ್ಲರ ಹಾರೈಕೆಯಿರಲಿ ಎಂದು ವಿನಂತಿಸುವೆ.


ಇಂತಿ ನಿಮ್ಮ,
**ಉಮಾ ಸಾಯಿರಾಂ**
**8722381194**



# ಸಂಪಾದಕೀಯ ನುಡಿ......

## ವಾಸ್ತು ಶಾಸ್ತ್ರ ಜೀವನಕ್ಕೆ ಅಗತ್ಯವೇ

ವಾಸ್ತು ಶಾಸ್ತ್ರ ಅತ್ಯಂತ ಪುರಾತನವಾದದ್ದು. ಭಿನ್ನವಾದದ್ದು. ಸಾಮಾನ್ಯರ ಜೀವನಕ್ಕೆ ಬೇಕಾ?

ಪಂಚಭೂತಗಳು ಸಮತೋಲನವಾಗಿರಬೇಕು. ಮೂಲ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ಬರುವಂತೆ ಮನೆ ಅಥವಾ ವ್ಯವಹಾರಿಕ ಸ್ಥಾನಗಳನ್ನು ನಿರ್ಮಿಸಿಕೊಳ್ಳಬೇಕು. ವಾಸಕ್ಕೆ ಯೋಗ್ಯವಾಗಿರಬೇಕು. ಅದೇ ವಾಸ್ತು. ಪ್ರಕೃತಿ ಜೊತೆಯಲ್ಲಿ ನಮ್ಮ ವಾಸಸ್ಥಾನ ಹೊಂದಾಣಿಕೆ ಮಾಡಿಕೊಳ್ಳುವುದು, ಸರಿದೂಗಿಸಿಕೊಳ್ಳುವುದು ಅಂಥ ಹೇಳಬಹುದು. ವಾಸ್ತು ಭವ್ಯ ಪರಂಪರೆಯನ್ನು ಉಳ್ಳಂತದ್ದು. ದೇವತೆಗಳು, ರಾಕ್ಷಸರು, ರಾಜ ಮಹಾರಾಜರು ಕೂಡ ಇದನ್ನು ಅಳವಡಿಸಿಕೊಂಡಿದ್ದರು. ಜ್ಞಾನ ವಿಜ್ಞಾನ ಎರಡು ಅಡಕವಾಗಿರುವಂತದ್ದು ವಾಸ್ತು.

ವಾಸ್ತು ನಂಬಬೇಕೆ? ಇದು ನಿಜವೇ? ಯಾಕೆ ಇದನ್ನು ಅಳವಡಿಸಿಕೊಳ್ಳಬೇಕು? ನ್ಯೂನತೆಗಳು ಇದ್ದರೆ ಏನು ಮಾಡಬೇಕು? ನ್ಯೂನತೆಗಳು ಎಂದರೆ ಏನು? ಎಂದು ನೀವು ಕೇಳುಬಹುದು. ವಾಸ್ತುವೆಂಬುದು ನಿಜ. ಅದನ್ನು ನಂಬಬೇಕು. ಇದರಿಂದ ಧನಾತ್ಮಕ ತರಂಗಗಳು ಬರುತ್ತವೆ. ನ್ಯೂನತೆ ಎಂದರೆ ಗಾಳಿ, ಬೆಳಕು ಇಲ್ಲದಿರುವುದು, ಮನೆ ಅಚ್ಚುಕಟ್ಟಾಗಿ ಇಲ್ಲದಿರುವುದು, ಪಂಚಭೂತಗಳು ಸಮತೋಲನದಲ್ಲಿ ಇಲ್ಲದೇ ಇರುವುದು. ವಾಸಸ್ಥಾನ ಚೌಕಟ್ಟಾಗಿ ಇಲ್ಲದೆ ಇರುವುದು. ಸೂರ್ಯನ ಬೆಳಕಿನ ತರಂಗಗಳು ಒಳಗೆ ಬರದೆ ಇರುವುದು. ಇವನ್ನು ಸರಿಪಡಿಸಿಕೊಳ್ಳುವುದೇ ವಾಸ್ತು.

ಪಂಚಭೂತಗಳು ನಾವು ಜೀವಿಸಲು ಅನಿವಾರ್ಯ. ಅದೇ ರೀತಿ ವಾಸಸ್ಥಾನಕ್ಕೂ ಅವಶ್ಯ. ನ್ಯೂನತೆಗಳನ್ನು ಕಟ್ಟಡಗಳನ್ನು ಒಡೆಯದೆ ಶಕ್ತಿಯುತವಾದ, ಯಂತ್ರ ಸಾಧನಗಳಿಂದ ಸಮತೋಲನಗೊಳಿಸಬಹುದು. ಜೊತೆಗೆ ನಮ್ಮ ದೈವೀ ಶಕ್ತಿ, ಧನಾತ್ಮಕ ಚಿಂತನೆಗಳು, ಮನೋಬಲ ಕೂಡ ಚೆನ್ನಾಗಿರಬೇಕು. ಆಗ ಮಾತ್ರ ವಾಸ್ತುವಿನ ಫಲ ದೊರೆಯುತ್ತದೆ. ಇದರಿಂದ ಸರ್ವತೋಮುಖ ಅಭಿವೃದ್ಧಿ ಸಾಧ್ಯ.

ಈ ವಾಸ್ತುಶಾಸ್ತವನ್ನು ಆಸ್ಪತ್ರೆಯಲ್ಲಿ ಅಳವಡಿಸಿದಾಗ ರೋಗಿಗಳು ಬೇಗ ಗುಣಮುಖರಾಗುತ್ತಾರೆ. ದೀರ್ಘಕಾಲಿಕ ರೋಗಗಳು ಗುಣಪಡಿಸಬಹುದು. ಶಾಲಾ ಕಾಲೇಜುಗಳಲ್ಲಿ ಅಳವಡಿಸಿದಾಗ ವಿದ್ಯಾರ್ಥಿಗಳಿಗೆ ಏಕಾಗ್ರತೆ, ಒಳ್ಳೆಯ ನಡತೆ ಹೆಚ್ಚುತ್ತದೆ. ಲಕ್ಷ – ಕೋಟಿ ಹಣ ಸುರಿದು ಕಟ್ಟಿದ ಮನೆಗಳು ಸಕಾರಾತ್ಮಕ ತರಂಗಗಳಿಂದ ತುಂಬಿರಬೇಕು. ವಾಸ್ತುವು ಮಾನಸಿಕವಾಗಿ, ದೈಹಿಕವಾಗಿ, ಆರ್ಥಿಕವಾಗಿ ಪರಿಣಾಮ ಬೀರುವುದನ್ನು ಕಾಣಬಹುದು. ಮನುಷ್ಯನಿಗೆ ಉಸಿರಾಟ ಎಷ್ಟು ಮುಖ್ಯವೋ, ಮನೆಯಲ್ಲಿಯನ ಕಿಟಕಿ ಬಾಗಿಲುಗಳೂ ಸಹ ಅಷ್ಟೇ ಮುಖ್ಯ. ಮೂಗು ಮುಚ್ಚಿಕೊಂಡು ಹೇಗೆ ಮನುಷ್ಯ ಜೀವಿಸಲಾರನೋ, ಹಾಗೆ ಗಾಳಿ, ಬೆಳಕು ಇಲ್ಲದೆ, ಕಿಟಕಿ ಬಾಗಿಲುಗಳ ಸರಿಯಾದ ಜಾಗದಲ್ಲಿ ಇಲ್ಲದಿದ್ದರೆ ಜೀವನ ತುಂಬಾ ಕಷ್ಟ.

ವೈಜ್ಞಾನಿಕವಾಗಿ ಕನ್ನಡಿ ಮುಂದೆ ಮಲಗಬಾರದು. ಬಾಗಿಲ ಮುಂದೆ ಕನ್ನಡಿ ಇರಬಾರದು. ತೊಲೆಗಳ ಕೆಳಗೆ ಮಲಗಬಾರದು. ಆಸ್ಪತ್ರೆ ಪಕ್ಕ, ಎದುರು, ದೇವಾಲಯದ ಎದುರು ಮನೆಗಳು ಇರಬಾರದು. ಇದು ವೈಜ್ಞಾನಿಕವಾಗಿಯೂ, ವಾಸ್ತವವಾಗಿಯೂ ಸತ್ಯ. ಇಂತಹ ಸರಳವಾದ ಸಹಜವಾದ ಅರಿವಿನಿಂದ ವಾಸಸ್ಥಾನವನ್ನು ನಾವು ಸಮತೋಲನಗೊಳಿಸಬಹುದು.

ಉದಾಹರಣೆಗೆ ಮನೆಯಲ್ಲಿ ಉತ್ತರ ದಿಕ್ಕಿನಲ್ಲಿ ಕೆಂಪು ದೀಪ ಹಾಕಿದರೆ ವೃತ್ತಿ ಜೀವನ ತುಂಬಾ ತೊಂದರೆಯಾಗುತ್ತದೆ. ಇಲ್ಲಿ ಅಡುಗೆ ಮನೆ ಇದ್ದರೆ ಶುಭ ಕಾರ್ಯಗಳು ಆಗುವುದೇ ಇಲ್ಲ. ಯಾವಾಗಲೂ ಕಲಹ. ಪೂರ್ವ ಈಶಾನ್ಯದಲ್ಲಿ ಪಾಯುಖಾನೆ (ಟಾಯ್ಲೆಟ್) ಇದ್ದರೆ ಯಾವಾಗಲೂ ಗುಣಪಡಿಸದಂತಹ ಕಾಯಿಲೆಗಳು ಬರುತ್ತವೆ.

ಪೂರ್ವ ಈಶಾನ್ಯದಲ್ಲಿ ಮುಖ್ಯದ್ವಾರ ಇದ್ದರೆ ಹೆಚ್ಚಿನ ವಾಸ್ತು ಸಮಸ್ಯೆಗಳು ಬರುವುದಿಲ್ಲ. ಪೂಜೆ ಕೋಣೆ ಪೂರ್ವಾಭಿಮುಖವಾಗಿದ್ದು ಸ್ವಚ್ಛವಾಗಿದ್ದು ನಿತ್ಯ ನಳಳಿಸುವಂತೆ ಇದ್ದರೆ ಎಷ್ಟೋ ದೋಷಗಳ ಪರಿಹಾರವಾಗುತ್ತದೆ.

ಗುಡಿಸಲು, ಜಗಳವಾಡುವ ಚಿತ್ರಣ, ಖಾಲಿ ಬಿಂದಿಗೆ ತೆಗೆದುಕೊಂಡು ಹೋಗುವ ಚಿತ್ರಣ, ಯುದ್ಧದ ಚಿತ್ರಣಗಳು, ಕಾದಾಡುವ ಚಿತ್ರಣಗಳು ಹಾಕಬಾರದು. ಇದು ವಾತಾವರಣದಲ್ಲಿ ಇರುವ ವ್ಯಕ್ತಿಗಳ ಸೂಕ್ಷ್ಮ ಶರೀರಕ್ಕೆ ಪರಿಣಾಮ ಬೀರುತ್ತದೆ. ಇದು ಸತ್ಯ. ಒಳ್ಳೆ ಚಿತ್ರಣಗಳು, ಮನಸ್ಸಿಗೆ ಖುಷಿಯನ್ನು ತರುವ ಚಿತ್ರಣಗಳು ನಮ್ಮ ನೆಮ್ಮದಿ ಅಭಿವೃದ್ಧಿಗೆ ಪೂರಕವಾಗುತ್ತವೆ. ಜ್ಞಾನ ವಿಜ್ಞಾನ ಅಡಕವಾಗಿರುವ ವೇದಿಕ್ ವಾಸ್ತು ಅಳವಡಿಸಿಕೊಂಡರೆ ಸುಂದರವಾದ ನೆಮ್ಮದಿ ಜೀವನ ನಮ್ಮದಾಗುತ್ತದೆ.

ಸರ್ವೆ ಜನಾಃ ಸುಖಿನೋ ಭವಂತು

– ಲತಾ ಶ್ರೀನಿವಾಸ್, ಪ್ರಧಾನ ಸಂಪಾದಕರು.
ಮೊಬೈಲ್ : 9448827469



# ರಾಜ್ಯಾಧ್ಯಕ್ಷರ ಕಿರು ಪರಿಚಯ

**ಶ್ರೀಮತಿ ಉಮಾ ಸಾಯಿರಾಂ**

ಶ್ರೀಮತಿ ಉಮಾರವರು ತುಮಕೂರಿನ ರಾಮಕೃಷ್ಣ ಶೆಟ್ಟಿ, ಕಾಂತಲಕ್ಷ್ಮಿ ಅವರ ಸುಪುತ್ರಿ. ಶ್ರೀ ಸಾಯಿರಾಮ್ ಅವರ ಜೊತೆಗೆ ವಿವಾಹ ಮತ್ತು ಸೌದಿಯಲ್ಲಿ ಉತ್ತಮ ಹುದ್ದೆಯಲ್ಲಿರುವ ಮಗ ಮಂಜುನಾಥ್ ಮತ್ತು ಸೊಸೆ ಪ್ರತಿಭಾ ರನ್ನು ಹೊಂದಿದ್ದಾರೆ. ಇಬ್ಬರು ಮೊಮ್ಮಕ್ಕಳಾದ ನಿರ್ವಿ, ಓರ್ವಿ ಜೊತೆ ಜೀವನವನ್ನು ಆನಂದಿಸುತ್ತಿದ್ದಾರೆ.

ಶ್ರೀಮತಿ ಉಮಾ ಸಾಯಿರಾಮ್ ತೆಲುಗು, ಕನ್ನಡ, ಇಂಗ್ಲೀಷ್ ಮತ್ತು ತಮಿಳು ಭಾಷೆಗಳಲ್ಲಿ ಪಾರಂಗತರಾಗಿದ್ದಾರೆ. ಹೆಚ್ಚಿನ ಬಾರಿ ಸ್ನೇಹಪರ, ಸಾಮಾಜಿಕ, ಸಮುದಾಯ ಕಲ್ಯಾಣ ಮತ್ತು ಆಧ್ಯಾತ್ಮಿಕ ಕೆಲಸಗಳಲ್ಲಿ ಎದ್ದು ಕಾಣುವ ವ್ಯಕ್ತಿತ್ವವನ್ನು ಹೊಂದಿದ್ದಾರೆ. ಬೆಂಗಳೂರಿನ ಶ್ರೀಮತಿ ಉಮಾ ಸಾಯಿರಾಂ ಅವರು ಕರ್ನಾಟಕ ಸರ್ಕಾರದ, ಕರ್ನಾಟಕ ಆರ್ಯ ವೈಶ್ಯ ಅಭಿವೃದ್ಧಿ ನಿಗಮದಲ್ಲಿ ನಿರ್ದೇಶಕರಾಗಿದ್ದಾರೆ. ಇವರು ಸುಸಂಸ್ಕೃತ ಅತ್ಯಂತ ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿದ್ದಾರೆ. 35 ವರ್ಷಗಳಿಗಿಂತ ಹೆಚ್ಚು ಉಪಯುಕ್ತ ಸೇವೆ ಮತ್ತು ವಿವಿಧ ಹುದ್ದೆಗಳಲ್ಲಿ ಕೊಡುಗೆಗಳನ್ನು ನೀಡಿದ್ದಾರೆ. ಅಲ್ಲದೆ ಸಮುದಾಯದ ಮತ್ತು ನಿರ್ಗತಿಕರಿಗೆ ಹೃದಯಪೂರ್ವಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಮತಿ ಉಮಾ ಸಾಯಿರಾಂ ಅವರು ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ಎರಡನೇ ಅವಧಿಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಖಿಲ ಕರ್ನಾಟಕ ಆರ್ಯ ವೈಶ್ಯ ಮಹಿಳಾ ಮಹಾಸಭಾದಲ್ಲಿ ಎರಡನೇ ಅವಧಿಗೆ ಉಪಾಧ್ಯಕ್ಷೆ, ಕಂಟೋನ್ಮೆಂಟ್ ವಾಸವಿ ಮಹಿಳಾ ಮಂಡಳಿ ಬೆಂಗಳೂರು ಸ್ಥಾಪಕ ಅಧ್ಯಕ್ಷೆ, ಇನ್ನರ್ ವೀಲ್ ರೋಟರಿ ಬೆಂಗಳೂರು ಪೂರ್ವ, ಮಾಜಿ ಅಧ್ಯಕ್ಷರು, ವಾಸವಿ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರು, ಆರ್ಯ ವೈಶ್ಯ ಮಹಿಳಾ ಒಕ್ಕೂಟದ ನಿರ್ದೇಶಕರು, ಶಿವಾಜಿ ನಗರದ ಬಿಜೆಪಿ ಮಹಿಳಾ ಮೋರ್ಚಾ ಮಾಜಿ ಅಧ್ಯಕ್ಷೆ, ಚಾಮರಾಜಪೇಟೆಯ ಜೆಸಿಗಳಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಒನ್‌ನೆಸ್ ವಿಶ್ವವಿದ್ಯಾನಿಲಯದ ಧರ್ಮ ಮಿತ್ರರಾಗಿ ಕೌನ್ಸೆಲಿಂಗ್ ಹಲವಾರು ಸೇವೆಗಳನ್ನು ಮಾಡುತ್ತಿದ್ದಾರೆ. ಪೆನಗೊಂಡ ಟ್ರಸ್ಟ್ ಪೂಜಾ ಕಮಿಟಿಯಲ್ಲಿ ಸೇವೆಸಲ್ಲಿಸಿದ್ದಾರೆ. ಮನೆ ಮನೆ ವಾಸವಿ ಸೇವಾ ಟ್ರಸ್ಟ್ / ಗೊರಗೊಂಟೆ ಪಾಳ್ಯದ ಆರ್ಯ ವೈಶ್ಯ ಸಂಘದಲ್ಲಿ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಬಾಳೆಎಲೆ (Tai Art), ಜಪಾನೀಸ್ ಕಲೆಯ Janur ಮುಂತಾದ ಅನೇಕ ಕಲೆಗಳಲ್ಲಿ ಚೆನ್ನಾಗಿ ಪಾರಂಗತರಾಗಿದ್ದಾರೆ.

ವಿವಿಧ ಹೂವುಗಳನ್ನು ಕಟ್ಟುವಲ್ಲಿ ಚೆನ್ನಾಗಿ ಪರಿಣತಿ ಹೊಂದಿದ್ದಾರೆ ಮತ್ತು ಅನೇಕ ಸಂಸ್ಥೆಗಳ ಸದಸ್ಯರಿಗೆ ತರಬೇತಿ ನೀಡುತ್ತಿದ್ದಾರೆ. ಕಲಶ ಮತ್ತು ಹೂವಿನ ಅಲಂಕಾರದಲ್ಲಿ ಪಾರಂಗತರಾಗಿದ್ದಾರೆ. ಶ್ರೀಮತಿ ಉಮಾ ಅವರದು ಅಸಂಖ್ಯಾತ ಸಾಮಾಜಿಕ ಸೇವೆಗಳು, ಕಲಾ ಸೇವೆ, ಆಧ್ಯಾತ್ಮಿಕ, ರಾಜಕೀಯ ಸೇವೆಗಳು ಸಲ್ಲಿಸುವ ಮತ್ತು ಎಲ್ಲರಿಗೂ ತಿಳಿದಿರುವ ಎದ್ದು ಕಾಣುವ ವ್ಯಕ್ತಿತ್ವ. ಈ ಸ್ಥಾನಮಾನಗಳೊಂದಿಗೆ ಅವರು ಅಗತ್ಯವಿರುವವರಿಗೆ ಮತ್ತು ಅಸಂಖ್ಯಾತ ವ್ಯಕ್ತಿಗಳಿಗೆ ಅನೇಕ ಸಹಾಯ ಮತ್ತು ಬೆಂಬಲವನ್ನು ನೀಡುತ್ತಿದ್ದಾರೆ. ಅಲ್ಲದೆ ಅಸಂಖ್ಯಾತ ವ್ಯಕ್ತಿಗಳು ಪ್ರಯೋಜನಗಳನ್ನು ಅನುಭವಿಸುತ್ತಿದ್ದಾರೆ ಹಾಗೂ ಅನೇಕ ಫಲಾನುಭವಿಗಳ ಮನಸ್ಸಿನಲ್ಲಿದ್ದಾರೆ.

ಇವರು ಅನೇಕ ಪ್ರಶಸ್ತಿಗಳನ್ನು ಹೊಂದಿದ್ದಾರೆ. ಉಲ್ಲೇಖಿಸಲು ಕೆಲವೊಂದು – * ಸೇವಾ ರತ್ನ * ಅದ್ಭುತ ಮಹಿಳೆ * ಗಾಂಧಿ ಪ್ರಿಯ * ಸ್ಟಾರ್ ಮಹಿಳಾ.



# ಪ್ರಧಾನ ಕಾರ್ಯದರ್ಶಿಯವರ ಕಿರು ಪರಿಚಯ

**ಶ್ರೀಮತಿ ಸಂಧ್ಯಾ ಜಗದೀಶ್**

ಜನ್ಮಸ್ಥಳ: ನೆಲ್ಲೂರು, ಆಂಧ್ರಪ್ರದೇಶ ತಂದೆ ತಾಯಿ: ಕೊಪ್ಪೂರು ಸುಬ್ರಹ್ಮಣ್ಯಂ, ಸುಜಾತಮ್ಮ. ವಿದ್ಯಾರ್ಹತೆ: ಬಿ.ಎಸ್ಸೀ. ಹಿಂದೀ ಪ್ರವೀಣ, ದೇವರನಾಮ ಮತ್ತು ಗಮಕ ಸೀನಿಯರ್, ಪ್ರಾಣಿಕ್ ಹೀಲರ್, ಸೌರಭ ದಾಸಸಾಹಿತ್ಯ ವಿದ್ಯಾಲಯದ ದಾಸ ವರ್ಗದಲ್ಲಿ ಪರಮೋತ್ತೀರ್ಣ.

ಪತಿ : ಜಗದೀಶ್ ಬಾಬು ಚಾರ್ಟರ್ಡ್ ಅಕೌಂಟೆಂಟ್. ಮಗ ಶ್ರಾವಣ ಗುಡುದೂರು. ಚಾರ್ಟರ್ಡ್ ಅಕೌಂಟೆಂಟ್ . ಸೊಸೆ ಶ್ರೇಯಾ ಎಮ್.ಬಿ.ಎ.

ಮಗ ಫಲ್ಗುಣ ಗುಡುದೂರು, ಇಂಜಿನಿಯರ್. ಮೊಮ್ಮಗ ಸ್ಮಯನ್

ಚಟುವಟಿಕೆಗಳು: 38 ವರ್ಷಗಳಿಂದ ಸಂಘಗಳಲ್ಲಿ ಸೇವೆ, ರಾಜಾಜಿನಗರ ವಾಸವಿ ಮಹಿಳಾ ಮಂಡಳಿ ಸ್ಥಾಪಕ ಕಮಿಟಿ, ವಿಜಯನಗರ ವಾಸವಿ ಮಂಡಳಿಯಲ್ಲಿ ಖಜಾಂಚಿಯಾಗಿ ಅಧ್ಯಕ್ಷೆ ಸ್ಥಾನವನ್ನು ಗಳಿಸಿದ್ದು, ಭಗಿನಿ ಸಮಾಜ, ನಿಸರ್ಗ ಸಮಾಜ, ಸೌಂದರ್ಯ ದೇವಿ ಮಹಿಳಾ ಮಂಡಳಿ ಮತ್ತು ಎಸ್ .ವಿ.ಕೆ. ಪಿ ಸ್ಪಿರಿಚುವಲ್ ಸೆಂಟರ್ ಸ್ಥಾಪಕ ಕೋರ್ ಕಮಿಟಿ ಸದಸ್ಯರು ಮತ್ತು ಕನ್ನಡ– ತೆಲುಗು ಟ್ರಾನ್ಸಲೇಟರು. ರೆಡ್ ಕ್ರಾಸ್ ಸಂಸ್ಥೆ ಸೇರ್ಪಡೆ, ವಾಸವಿ ಮಹಿಳಾ ಮಂಡಳಿಗಳಲ್ಲಿ ಖಜಾಂಚಿ, ಕಾರ್ಯದರ್ಶಿ ಮತ್ತು ಅಧ್ಯಕ್ಷರು, ಪ್ರಪಂಚ ಆರ್ಯ ವೈಶ್ಯ ಕರ್ನಾಟಕ ಮಹಿಳಾ ಮಹಾಸಭೆಯ ಕಾರ್ಯದರ್ಶಿ, ರಾಜ್ಯಾಧ್ಯಕ್ಷರು. ದಾಸ ಸಾಹಿತ್ಯ ಪ್ರಾಜೆಕ್ಟ್ (ಟಿ.ಟಿ.ಡಿ) ಕೋ–ಆರ್ಡಿನೇಟರ್. ಕರಕುಶಲತೆ, ನೃತ್ಯ, ನಾಟಕ, ದೇವರನಾಮ, ಅನ್ನಮಾಚಾರ್ಯ ಪ್ರಾಜೆಕ್ಟ್ ಮತ್ತು ದಾಸ ಸಾಹಿತ್ಯ ಪ್ರಾಜೆಕ್ಟ್ ಸೇರ್ಪಡೆಯೊಂದಿಗೆ ಕಾರ್ಯನಿರ್ವಹಣೆ, ಹಲವಾರು ಸ್ಪರ್ಧೆಗಳ ನಾಯಕತ್ವದಲ್ಲಿ ವಿಜಯಸಾಧನೆ. 600ಕ್ಕೂ ಮೇಲ್ಪಟ್ಟು ಭಜನಾ ಕಾರ್ಯಕ್ರಮಗಳು, 40 ಸಾಮೂಹಿಕ ಪೂಜೆಗಳ ನಾಯಕತ್ವ,ಜಾಲತಾಣದಲ್ಲಿ 2000 ವಿದ್ಯಾರ್ಥಿಗಳಿಗೆ ತೆಲುಗು ತಿರುಪ್ಪಾವೈ, ಶ್ರೀ ಲಕ್ಷ್ಮೀ ಶೋಭಾನೆ, ವೇದಗಳು, ಸ್ತೋತ್ರಗಳು, ಕೇಶವ ಪಂಚರತ್ನಗಳು ಮತ್ತು ದೇವರ ನಾಮಗಳ ಕಲಿಕಾ ತರಗತಿಗಳು ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ನಡೆಸಿದರು. ಅನ್ನಮಾಚಾರ್ಯ ಕೀರ್ತನೆಗಳ ಸ್ಪರ್ಧೆಯಲ್ಲಿ ವಿಜಯ ಸಾಧನೆ, ತಿರುಪತಿ ಎಸ್.ವಿ.ಬಿ.ಸಿ ದಾಸ ಸಾಹಿತ್ಯ ರಾಜ್ಯ ಮಟ್ಟದ ಭಜನೆ ಸ್ಪರ್ಧೆ ಉನ್ನತ ಸ್ಥಾನ, ತಿರುಪತಿ, ಉಡುಪಿ, ಅಹೋಬಲ, ಮಂತ್ರಾಲಯ, ನೈಮಿಶಾರಣ್ಯ, ಕುಕ್ಕೆ ಸುಬ್ರಹ್ಮಣ್ಯ ಮುಂತಾದ ಹಲವಾರು ಸ್ಥಳಗಳಲ್ಲಿ ಭಜನಾ ಕಾರ್ಯಕ್ರಮಗಳ ನಾಯಕತ್ವ ವಹಿಸಿದ್ದು, ಮಹಿಳಾ ಉದ್ಯಮಿಯಾಗಿ 600 ಮಹಿಳಯರಿಗೆ ಸ್ವಯಂ ಉದ್ಯೋಗ ಅವಕಾಶಗಳು, 10 ವರ್ಷಗಳು ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರ, ಬಡ ಹೆಣ್ಣು ಮತ್ತು ಅಂಧ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಶಿಕ್ಷಣ ಮತ್ತು ಮದುವೆಯ ಸಹಾಯ. ಹಲವಾರು ದೇವಸ್ಥಾನ, ವೈದಿಕ ಮಹಲ್ ನಿರ್ಮಾಣ ಮತ್ತು ಹಲವಾರು ಸಂಘ ಸಂಸ್ಥೆಗಳ ದತ್ತಿ ದಾನಿಗಳು. ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಹಾಯ ಹಸ್ತ.

ಪ್ರಶಸ್ತಿಗಳು: ವಾಸವಿ ಸೇವಾ ರತ್ನ, ಕಲಾಸಾಗರ ಪ್ರಶಸ್ತಿ, ಮಹಿಳಾ ಮಾಣಿಕ್ಯ, ಅತ್ಯುತ್ತಮ ಶಿಕ್ಷಕಿ, ಅಪರಾಜಿತ ವಾವ್ ಅವಾರ್ಡ್, ನಾದ ಸರಸ್ವತಿ, ಗಾಂಧಿಪ್ರಿಯ, ಸೌತ್ ಇಂಡಿಯಾ ಬೆಸ್ಟ್ ಬಿಜಿನೆಸ್ ಡೈರೆಕ್ಟರ್ ಮುಂತಾದವು.



# ಖಜಾಂಚಿ ಕಿರು ಪರಿಚಯ

**ಶ್ರೀಮತಿ ಶಕುಂತಲಾ**

ಸಾಂಸ್ಕೃತಿಕ ನಗರಿ ಮೈಸೂರಿನ ಶ್ರೀಮತಿ ಸರಸ್ವತಿ ಮತ್ತು ಲೇಟ್ ಶ್ರೀ ವಸಂತ್ ಕುಮಾರ್ ಇವರ ಸುಪುತ್ರಿ ಶಕುಂತಲಾ. ಬಾಲ್ಯದಿಂದಲೂ ಇವರು ಸಕ್ರಿಯವಾಗಿದ್ದು ಭರತನಾಟ್ಯಂ, ಶಾಸ್ತ್ರೀಯ ಸಂಗೀತ, ಹಿಂದಿ, ಕ್ರೀಡೆಗಳಲ್ಲಿ ತರಬೇತಿ ಪಡೆದಿರುತ್ತಾರೆ.

ಇವರು ಅನೇಕ ನೃತ್ಯ ಪ್ರದರ್ಶನಗಳನ್ನು ನೀಡಿದ್ದಾರೆ ಮತ್ತು ಅವರ ಶಾಲಾ ಅವಧಿಯಲ್ಲಿ ರಸ್ತೆ ಸುರಕ್ಷತೆಗಾಗಿ ವಿದ್ಯಾರ್ಥಿ ಸಂಘ ಅಂದರೆ SARS ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ಕ್ರೀಡಾಕೂಟಗಳಲ್ಲಿ ಶಾಲೆಯನ್ನು ಪ್ರತಿನಿಧಿಸಿದ್ದಾರೆ. SSLC ಯಲ್ಲಿ ಉತ್ತಮ Rank ಗಳಿಸಿದ್ದಕ್ಕಾಗಿ ಇವರು ರಾಷ್ಟ್ರೀಯ ಮೆರಿಟ್ ಸ್ಕಾಲರ್ಶಿಪ್ ಪಡೆದಿರುತ್ತಾರೆ.

ಮೈಸೂರಿನ ಪ್ರತಿಷ್ಠಿತ ಮರಿಮಲ್ಲಪ್ಪ ಪ್ರೌಢಶಾಲೆಯಲ್ಲಿ ವ್ಯಾಸಂಗ, ಮೈಸೂರಿನ ಮರಿಮಲ್ಲಪ್ಪ ಜೂನಿಯರ್ ಕಾಲೇಜಿನಲ್ಲಿ ಪಿಯುಸಿ ಮತ್ತು ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ಬಿಇ ಪದವಿಯನ್ನು ಪಡೆದಿರುತ್ತಾರೆ.

ವೃತ್ತಿ ಪರವಾಗಿ ಇವರು ಕಳೆದ 28 ವರ್ಷಗಳಿಂದ ಐಟಿಯಲ್ಲಿ ಕಾರ್ಯವನ್ನು ನಿರ್ವಹಿಸಿದ್ದಾರೆ. Infosys, Sonata, Mindtree, Quintiles, Spaneos ಮುಂತಾದ ಪ್ರಮುಖ ಐಟಿ ಕಂಪನಿಗಳಲ್ಲಿ ಕೆಲಸ ಮಾಡಿದ್ದಾರೆ. ಈಗ ಅವರು ತಮ್ಮದೇ ಆದ ಆರಂಭಿಕ ಸಾಫ್ಟ್‌ವೇರ್ ಕಂಪನಿ Megahard Technologies LLP ಯನ್ನು ನಡೆಸುತ್ತಿದ್ದಾರೆ.

ಸಕ್ರಿಯವಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡೆಸಿ ತೊಡಗಿಸಿಕೊಂಡಿದ್ದಾರೆ.

- ಸೆಕ್ಟರ್ ವಾರ್ಡನ್ – ಕರ್ನಾಟಕ ಸಿವಿಲ್ ಡಿಫೆನ್ಸ್ ವಿಭಾಗ 33
- ಸಂಚಾಲಕರು – ಟೆಕ್ನಿಕಲ್ ಸಮಿತಿ, ಕರ್ನಾಟಕ ಆರ್ಯವೈಶ್ಯ ಮಹಾಸಭಾ
- ಖಜಾಂಚಿ – ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ
- ನಿಕಟ ಪೂರ್ವ ಪ್ರಧಾನ ಸಂಪಾದಕರು – ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ
- ಮಾಜಿ ಉಪಸಂಪಾದಕರು – ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ
- ಮೆರಿಟ್ಸ್ ಮತ್ತು ಸ್ಕಾಲರ್ಶಿಪ್ ಸಮಿತಿ ಚೇರ್ ಪರ್ಸನ್ – AVOPA ಬೆಂಗಳೂರು
- ಮಾಜಿ ಡಿಜಿಟಲ್ ಸಮಿತಿಯ ಅಧ್ಯಕ್ಷರು – AVOPA ಬೆಂಗಳೂರು

ಇವರು ಯಶವಂತಪುರದಲ್ಲಿ ಹೋಲ್ ಸೇಲ್ ಉದ್ಯಮಿಯಾಗಿರುವ ಶ್ರೀ ಶಿವಪ್ರಕಾಶ್ ಅವರನ್ನು 2000ರಲ್ಲಿ ವಿವಾಹವಾದರು. ಇವರ ಮಗ ಶ್ರೀ ಶ್ರೇಯಸ್ IIIT-b ಯಲ್ಲಿ MTech ವ್ಯಾಸಂಗ ಮುಗಿಸಿ Qualcomm ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.



# ಪ್ರಧಾನ ಸಂಪಾದಕರ ಕಿರು ಪರಿಚಯ

**ಶ್ರೀಮತಿ ಲತಾ ಶ್ರೀನಿವಾಸ್**


ಲತಾ ಶ್ರೀನಿವಾಸ್
ಎಂ.ಎ. ರಾಜ್ಯಶಾಸ್ತ್ರ
W/o. ಸಿ.ಎಸ್. ಶ್ರೀನಿವಾಸ್
ಫ್ಲಾಟ್ ನಂ. 901 ಇಂಡಿಗೋ ಬ್ಲಾಕ್,
ಹೆಚ್.ಎಂ. ವರ್ಲ್ಡ್ ಸಿಟಿ,
ಜಂಬೂಸವಾರಿ,
ಜೆ.ಪಿ. ನಗರ, 8ನೇ ಹಂತ
ರಾಯಲ್ ಕಂಟ್ರಿ, ಅಂಜನಾ ಪುರ,
ಬೆಂಗಳೂರು – 560 062,
ಕರ್ನಾಟಕ
ಫೋನ್ : 9448827469


ತಂದೆ – ವೈ. ಶೇಷಾಚಲ ಶೆಟ್ಟಿ, ತಾಯಿ – ರುಕ್ಮಿಣಮ್ಮ, ಹುಟ್ಟಿದ ಸ್ಥಳ– ಚಿತ್ರದುರ್ಗ, ಪತಿಯ ಊರು – ತುಮಕೂರು, 2016ರಿಂದ ಬೆಂಗಳೂರಿನಲ್ಲಿ ವಾಸ. ಪತಿ – ಸಿ.ಎಸ್. ಶ್ರೀನಿವಾಸ್, ಮಗ – ಸಿ.ಎಸ್. ಕಿಶನ್ (Software Engineer) ಸೊಸೆ – ಶ್ರೀವಾಣಿ (B.E., MBA), ಮೊಮ್ಮಕ್ಕಳು – ಸಿ.ಕೆ. ನಿಕಿಶ ಮತ್ತು ಮೊಮ್ಮಗ

1. ವೃತ್ತಿ ವಾಸ್ತುತಜ್ಞ: VEADIC VAASTU Consultant (without demolition). 25 ವರ್ಷ ವಾಸ್ತುವಿನಲ್ಲಿ ಅನುಭವ ಜಾಗತಿಕವಾಗಿ ಪರಿಹಾರಗಳನ್ನು ನೀಡಲಾಗಿದೆ. ವಿಶ್ವಾದ್ಯಂತು ವಾಸ್ತು ಮಾಡಿ ಅಭಿನಂದನೆಗೆ ಒಳಗಾಗಿದೆ.
2. Reiki Grand Master, Pyraramidologist, Numerologist 25 ಸಾವಿರಕ್ಕೂ ಹೆಚ್ಚು ಶಿಷ್ಯರನ್ನು ಹೊಂದಿದ್ದೇವೆ.
3. ಕರ್ನಾಟಕ ಸರ್ಕಾರ ಮುಜರಾಯಿ ಇಲಾಖೆಯಲ್ಲಿ ಹಲವು ವರ್ಷ ಸೇವೆ ಸಲ್ಲಿಸಿದ್ದೇನೆ.
4. ವೈಶ್ಯ ಕೋ ಆಪರೇಟಿವ್ ಬ್ಯಾಂಕ್ ಚುನಾಯಿತ ನಿರ್ದೇಶಕಿಯಾಗಿ ಸೇವೆ ಸಲ್ಲಿಸಿದ್ದೇನೆ.
5. ಸಂಘಟನಾ ಕಾರ್ಯದರ್ಶಿ ಕರ್ನಾಟಕ ಆರ್ಯ ವೈಶ್ಯ ಮಹಾಸಭಾ ಮಹಿಳಾ ಸಬಲೀಕರಣ ಘಟಕ
6. ಕರ್ನಾಟಕದಾದ್ಯಂತ ಹೆಸರಾಂತ ಕಾರ್ಯಕ್ರಮಗಳಲ್ಲಿ ನಿರೂಪಣೆ ಮಾಡಿ ಬಿಹಾರದ ಗವರ್ನರ್ ಹಲವು ಗಣ್ಯರಿಗೆ ನಿರೂಪಣೆ ಮಾಡಿದ ಕೀರ್ತಿ ನನ್ನದಾಗಿದೆ ಹಾಗೂ ಶ್ರೀ ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಗುರುಗಳಿಂದ ಆಶೀರ್ವಾದ ಪಡೆದಿದ್ದೇನೆ.
7. ಸ್ಥಾಪಕ ವಾಸವಿ ಕ್ಲಬ್‌ನ ಅಧ್ಯಕ್ಷಿಣಿಯಾಗಿ ಅನೇಕ ಪ್ರಶಸ್ತಿಗಳು ಸ್ವೀಕರಿಸಿದ್ದೇನೆ.
8. ಸ್ವಾಮೀ ಶ್ರೀ ಶನೇಶ್ವರ ಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿಯಾಗಿ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಇದ್ದೇನೆ.
9. ಶ್ರೀ ವಾಸವಿ ಮಹಿಳಾ ಮಂಡಳಿ ಪುಟ್ಟೇನಹಳ್ಳಿ 2022–23ರ ಅಧ್ಯಕ್ಷೆಯಾಗಿ 80ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಮಾಡಿ 12 ಪ್ರಶಸ್ತಿಗಳನ್ನು ಅಖಿಲ ಕರ್ನಾಟಕ ಆರ್ಯ ವೈಶ್ಯ ಮಹಿಳಾ ಮಹಾಸಭಾದಿಂದ ಪಡೆದಿರುತ್ತೇನೆ.
10. ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷರಾದ ಶ್ರೀ ಆರ್.ಪಿ. ರವಿಶಂಕರ್ ಅವರಿಂದ ಅಭಿನಂದನಾ ಪತ್ರ ಪಡೆದಿರುತ್ತೇನೆ.
11. ಪ್ರಧಾನ ಸಂಪಾದಕರು, ಅಖಿಲ ಕರ್ನಾಟಕ ಆರ್ಯ ವೈಶ್ಯ ಮಹಿಳಾ ಮಹಾಸಭೆ
12. ವಾಸಸಿ ಸಿರಿ ಪ್ರಖ್ಯಾತ ಪ್ರಶಸ್ತಿ ಬೆಂಗಳೂರು ಆರ್ಯ ವೈಶ್ಯ ಮಂಡಳಿಗಳ ಒಕ್ಕೂಟ 2024ರಲ್ಲಿ ಪಡೆದಿರುತ್ತೇನೆ. (ವೇದಿಕ್ ವಾಸ್ತುವಿನ ಸಾಧನೆಗಾಗಿ)
13. ಪ್ರತಿಭಾನ್ವಿತ ಮಹಿಳೆ, ಮಹಿಳಾ ಮಾಣಿಕ್ಯ ಪ್ರಶಸ್ತಿಯನ್ನು ಅಖಿಲ ಕರ್ನಾಟಕ ಆರ್ಯ ವೈಶ್ಯ ಮಹಿಳಾ ಮಹಾಸಭಾದಿಂದ ಪಡೆದಿರುತ್ತೇನೆ.
14. ಸುದ್ದಿಮಿತ್ರ, ಪ್ರಜಾ ಪ್ರಗತಿ, ಮುಜುರಾಯಿ ಪತ್ರಿಕೆಗಳಲ್ಲಿ ಪ್ರತಿಭಾ ಕುಸುಮದಲ್ಲಿ ಅಂಕಣ ಬರಹಗಾರ್ತಿಯಾಗಿ ವೇದಿಕ್ ವಾಸ್ತು ಬಗ್ಗೆ ಅರಿವು ಮೂಡಿಸಿದ್ದೇನೆ.

# 43ನೇ ವರ್ಷದ ರಾಜ್ಯಮಟ್ಟದ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆ














# 43ನೇ ವರ್ಷದ ರಾಜ್ಯಮಟ್ಟದ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆ





























# 43ನೇ ವರ್ಷದ ರಾಜ್ಯಮಟ್ಟದ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆ

















# ಪದಗ್ರಹಣ ಸಮಾರಂಭ





















## ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ (ರಿ)

# 43ನೇ ವರ್ಷದ ರಾಜ್ಯಮಟ್ಟದ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆಯ ವರದಿ

ದಿನಾಂಕ 03.08.2024ರಂದು ಬೆಳಿಗ್ಗೆ 8.30ಕ್ಕೆ ವಿ.ವಿ.ಪುರಂ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಿಂದ ವಾಸವಿ ದೇವಿಯ ರಥ ಯಾತ್ರೆ ಪ್ರಾರಂಭವಾಗಿ, ವಿವಿಧ ವೇದ ಘೋಷಗಳಿಂದ ವಾಸವಿ ದೇವಿಯ ಹಾಡು, ನೃತ್ಯಗಳಿಂದ ಮೆರವಣಿಗೆಯು 10.30ಕ್ಕೆ ವಾಸವಿ ಕನ್ವೆನ್ಷನ್ ಹಾಲ್ ತಲುಪಿತು. ಈ ಮೆರವಣಿಗೆಯಲ್ಲಿ ಶಿವಮೊಗ್ಗ ಮಹಿಳಾ ಸಂಘದವರಿಂದ ಡೊಳ್ಳು ಕುಣಿತ, ಕೇರಳದ ಚಂಡೆ ಹಾಗೂ ವಿವಿಧ ಸ್ಪರ್ಧೆಗಳಾದ ಬ್ಯಾನರ್ ಪ್ರಸನ್‌ಟೇಶನ್, ವಾಸವಿ ದೇವಿಯ ಫೋಟೋ ಡೆಕೋರೇಷನ್ ಮತ್ತು ಮೊದಲು ಬಂದು ನೋಂದಣಿ ಮಾಡಿದ 5 ಮಂಡಳಿಗಳಿಗೆ ಬಹುಮಾನ, ಹೀಗೆ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಹಾಗೆಯೇ She for Society ಯವರ Bike Rally ಕೂಡಾ ವಿಶೇಷವಾಗಿತ್ತು.

### 43ನೇ ವರ್ಷದ ರಾಜ್ಯಮಟ್ಟದ ವಾರ್ಷಿಕೋತ್ಸವ

ಬೆಳಗ್ಗೆ 10.30ಕ್ಕೆ ರಾಜ್ಯಾಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರ ಅಧ್ಯಕ್ಷತೆಯಲ್ಲಿ 43ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಯುವ ಬ್ರಿಗೇಡ್‌ನ ಶ್ರೀ ಚಕ್ರವರ್ತಿ ಸೂಲಿಬೆಲೆ ಹಾಗೂ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷರಾದ ಶ್ರೀ ಆರ್.ಪಿ. ರವಿಶಂಕರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು, ಅವರೊಂದಿಗೆ ಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ನಾಗರತ್ನ ಗೌರಿ ಶಂಕರ್ ಅವರು, ಪ್ರಧಾನ ಕಾರ್ಯದರ್ಶಿ ಶ್ರೀಮತಿ ಅರುಣಾ ಸಿರಿಗೇರಿ, ಖಜಾಂಚಿ ಶ್ರೀಮತಿ ಶ್ರೀವಿದ್ಯಾ ಹಾಗೂ ಪ್ರಧಾನ ಸಂಪಾದಕಿ ಶ್ರೀಮತಿ ಶಕುಂತಲಾ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀಮತಿ ಅರುಣಾ ಸಿರಿಗೇರಿಯವರು ಅಧ್ಯಕ್ಷಿಣಿ ಶ್ರೀಮತಿ ಸುಧಾಮೂರ್ತಿಯವರಿಗೆ ಸಂಸ್ಥೆಯ ಪ್ರತೀಕವಾದ ಲಾಂಛನವನ್ನು ತೊಡಿಸಿದರು.

ಮೊದಲಿಗೆ ನಮ್ಮನ್ನು ಅಗಲಿದ ಮಾಜಿ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ನಂದಕುಮಾರ್‌ರವರಿಗೆ ಒಂದು ನಿಮಿಷ ಮೌನಾಚರಣೆ ಮಾಡಿ ನಂತರ ಕಾರ್ಯಕ್ರಮವನ್ನು ಪದ್ಮಿನಿ ಉಮೇಶ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಅಧ್ಯಕ್ಷರು ಮುಖ್ಯ ಅತಿಥಿಗಳು ಮಾಜಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳೊಂದಿಗೆ ದೀಪ ಬೆಳಗಿಸುವುದರ ಮೂಲಕ 43ನೇ ವರ್ಷದ ವಾರ್ಷಿಕೋತ್ಸವವನ್ನು ಉದ್ಘಾಟಿಸಿದರು.

ರಾಜ್ಯಾಧ್ಯಕ್ಷರು ಜೈ ವಾಸವಿ ಎಂದು ಹೇಳುತ್ತಾ ಮುಖ್ಯ ಅತಿಥಿಗಳನ್ನು ಸ್ಥಾಪಕ ಅಧ್ಯಕ್ಷರನ್ನು ಮಾಜಿ ಅಧ್ಯಕ್ಷರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಅಜೀವ ಸದಸ್ಯರನ್ನು ಮತ್ತು ಬೆಂಗಳೂರು ಹಾಗೂ ಹೊರ ಊರಿನಿಂದ ಬಂದಂತಹ ಎಲ್ಲಾ ಜನರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಈ ವರ್ಷದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಿದ್ದೇವೆಂದು ತಿಳಿಸಿದರು. ಈ ವರ್ಷ ಆರೋಗ್ಯ ಸಿರಿ, ಧನ್ವಂತರಿ, ಉದ್ಯೋಗ ಮಿತ್ರ ಯೋಜನೆಗಳನ್ನು ಹಮ್ಮಿಕೊಂಡಿದ್ದೆವು.

1. **ಆರೋಗ್ಯ ಸಿರಿ :** ಅಂತರಜಾಲದ ಮೂಲಕ ಪರಿಣಿತ ವೈದ್ಯರಿಂದ ಆರೋಗ್ಯದ ಬಗ್ಗೆ ಮಾಹಿತಿ ಕೊಡಿಸುವುದು.

2. **ಧನ್ವಂತರಿ :** ಧನ್ವಂತರಿ ಯೋಜನೆಯಲ್ಲಿ 3 ಜನರಿಗೆ ರೂ. 1000/– ಒಂದು ತಿಂಗಳಂತೆ 12 ತಿಂಗಳು, 4 ಜನರಿಗೆ 6 ತಿಂಗಲೂ ಹಾಗೂ 4 ಜನರಿಗೆ ಒಂದೇ ಸಾರಿ 2000 ರೂ. ದಿಂದ 4000 ರೂ. ಅಂತೆ ಅವರ ಸಮಸ್ಯೆಗೆ ಅನುಗುಣವಾಗಿ ಕೊಡಲಾಗಿದೆ. ಒಟ್ಟು 11 ಜನ ಫಲಾನುಭವಿಗಳಿಗೆ ಸಹಾಯ ಧನವನ್ನು ಮಾಡಲಾಗಿದೆ.

3. **ಉದ್ಯೋಗ ಮಿತ್ರ :** ಈ ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಕಂಪ್ಯೂಟರ್ ತರಬೇತಿಯೊಂದಿಗೆ ಊಟ, ವಸತಿ ಹಾಗೂ ಉದ್ಯೋಗ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ.

ಈ ವರ್ಷ ದಸರಾ ಹಬ್ಬದಲ್ಲಿ ಅಖಂಡ ದೇವಿ ಭಜನೆಯನ್ನು ಹಮ್ಮಿಕೊಳ್ಳಲಾಗಿದ್ದು ಒಂದು ಮಂಡಳಿಯಿಂದ 10 ಜನರಂತೆ 30 ಮಂಡಳಿಗಳನ್ನು ಆಹ್ವಾನಿಸಲಾಗಿದ್ದು, ವಿಶೇಷವೇನೆಂದರೆ 400 ಮಹಿಳೆಯರಿಗೆ ಮಡಲಕ್ಕಿ ತುಂಬುವ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.

ಈ ವರ್ಷ ಮಹಿಳಾ ಸಮಾವೇಶಗಳನ್ನು ಶಿವಮೊಗ್ಗ ಹಾಗೂ ಗಂಗಾವತಿಯ ಹೀರೆಜಂತಕಲ್ಲಿನಲ್ಲಿ ಹಮ್ಮಿಕೊಂಡಿದ್ದೆವು.

ಅಜೀವ ಸದಸ್ಯರಿಗೋಸ್ಕರ 'ಸಂಕ್ರಾಂತಿ ಸಡಗಡ' ಸ್ಪರ್ಧೆಯನ್ನು ಆನ್‌ಲೈನ್‌ನಲ್ಲಿ ಆಯೋಜಿಸಲಾಗಿತ್ತು. ಇದರಲ್ಲಿ ಒಟ್ಟು 5 ಬಹುಮಾನಗಳನ್ನು ವಿತರಿಸಲಾಯಿತು.

ಅಖಿಲ ಭಾರತ ಆರ್ಯವೈಶ್ಯ ಮಹಿಳಾ ಮಹಾಸಭಾದವರು ಆಯೋಜಿಸಿರುವ ವಾಸವಿ ವರ್ಣಜಾಲಮ್ ಸ್ಪರ್ಧೆಯಲ್ಲಿ ನಮ್ಮ ರಾಜ್ಯದಿಂದ 31 ಜನರು ಭಾಗವಹಿಸಿದರು. ಎಲ್ಲ ರಾಜ್ಯಗಳಿಗಿಂತಲೂ ನಮ್ಮ ರಾಜ್ಯದಿಂದ ಹೆಚ್ಚಿನ ಸ್ಪರ್ಧಿಗಳು ಭಾಗವಹಿಸಿರುವುದರಿಂದ ಅಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರಿಗೆ ಅತ್ಯುತ್ತಮ ಅಧ್ಯಕ್ಷರು ಮತ್ತು ತಂಡ ಎಂಬ ಪ್ರಶಸ್ತಿ ಲಭ್ಯವಾಗಿದೆ. ರಾಷ್ಟ್ರಮಟ್ಟದಲ್ಲಿ ಮೊದಲನೆ ಬಹುಮಾನ ನಮ್ಮ ರಾಜ್ಯಕ್ಕೆ ಬಂದಿದೆ ಹಾಗೂ ರಾಜ್ಯಮಟ್ಟದಲ್ಲಿ 3 ಬಹುಮಾನಗಳು ಬಂದಿವೆ.

ನಮ್ಮ ಸಂಸ್ಥೆಯಿಂದ ವಾಸವಿ ಜಯಂತಿಯ ಪ್ರಯುಕ್ತ ವಾಸವಿ ಚಿತ್ರ ಬಿಡಿಸುವ ಸ್ಪರ್ಧೆ ಆಯೋಜಿಸಲಾಗಿದ್ದು ಇದಕ್ಕೆ 6 ಬಹುಮಾನಗಳನ್ನು ವಿತರಿಸಲಾಯಿತು.

ಉದ್ಘಾಟಕರಾಗಿ ಆಗಮಿಸಿರುವಂತ ಶ್ರೀಯುತ ಚಕ್ರವರ್ತಿ ಸೂಲಿಬೆಲೆ, ಖ್ಯಾತ ಭಾಷಣಕಾರರು, ವಾಗ್ಮಿ, ಚಿಂತಕರು, ಅಂಕಣಕಾರರು, ಬರಹಗಾರರು ಮತ್ತು ಸಾಮಾಜಿಕ ಕಾರ್ಯಕರ್ತರು, ಜೊತೆಗೆ ಯುವ

ಬ್ರಿಗೇಡ್ ಸಂಘಟನೆಯ ಸಂಸ್ಥಾಪಕರು. ಅವರು ಭಾಷಣ ಮಾಡುತ್ತಾ ಹಿಂದೂತ್ವ ಹಾಗೂ ನಮ್ಮ ಧರ್ಮದಲ್ಲಿ ಸ್ತ್ರೀಯರ ಬಗ್ಗೆ ಇರುವ ಗೌರವ ಯಾವ ರೀತಿ ಇದೆ ಎಂದು ತಿಳಿಸಿದರು.

ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರನ್ನು ಭೋಗದ ವಸ್ತುವಾಗಿ ನೋಡುತ್ತಾರೆ. ಆದರೆ ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಗೌರವ ದೃಷ್ಟಿಯಿಂದ ನೋಡುತ್ತಾರೆ. ಭಾರತೀಯ ಸಮಾಜ ಸ್ತ್ರೀ ಪರವಾದ ಸಮಾಜ. ಪ್ರಸ್ತುತ ಸಂದರ್ಭದಲ್ಲಿ ವಾಸವಿ ಮಹಿಳಾ ಸಮಾಜದ ದೊಡ್ಡ ಜವಾಬ್ದಾರಿ ಎಂದರೆ ಈಗಿನ ಯುವ ಜನರನ್ನು ವಾಸವಿ ದೇವಿಯತ್ತ ಕರೆದೊಯ್ಯಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿರುವ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷರಾದ ಶ್ರೀ ಆರ್.ಪಿ. ರವಿಶಂಕರರು ಮಾತನಾಡುತ್ತಾ ಈ ಸಂಘಟನೆ ನಾವೆಲ್ಲರೂ ಹೆಮ್ಮೆ ಪಡುವಂತದ್ದು ಬದಲಾದ ವಾತಾವರಣದಲ್ಲಿ ಕೌಟುಂಬಿಕ ಪ್ರೀತಿ ನಶಿಸಿಹೋಗುತ್ತಿದೆ. ಮೊಬೈಲ್‌ನ ಬಳಕೆಯಿಂದ ಪರಸ್ಪರ ಮಾತನಾಡುವುದು ಕಡಿಮೆ ಆಗಿದೆ ಎಂದರು. ಅಲ್ಲದೆ ಅವರ ಸಾಧನೆಯ ಒಂದು ಕಿರುನೋಟವನ್ನು ವೀಡಿಯೋ ಮೂಲಕ ಸಭೆಗೆ ಪ್ರದರ್ಶಿಸಿದರು. ಸಿವಿಲ್ ಸರ್ವಿಸ್ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳಿಗೆ ಮಾರ್ಗ ಸೂಚಿಸುವ ವಿಡಿಯೊವನ್ನು ಪ್ರದರ್ಶಿಸಿದರು. ಅಧ್ಯಕ್ಷರು ಮುಖ್ಯ ಅತಿಥಿಗಳಿಗೆ ಗೌರವ ಸಮರ್ಪಣೆಯನ್ನು ಮಾಡಿದರು.

ನಂತರ 30 ಜನರ ವಿದ್ಯಾರ್ಥಿಗಳಿಗೆ ಮೆಡಲ್, ಸರ್ಟಿಫಿಕೇಟ್ ಮತ್ತು ನಗದು ಬಹುಮಾನದಿಂದ ಪ್ರತಿಭಾ ಪುರಸ್ಕಾರ ನೀಡಲಾಯಿತು.

## ಸರ್ವ ಸದಸ್ಯರ ಸಭೆ

ಅಧ್ಯಕ್ಷರಾದ ಶ್ರೀಮತಿ ಸುಧಾ ಮೂರ್ತಿಯವರು ಎಲ್ಲಾ ಮಾಜಿ ಅಧ್ಯಕ್ಷರನ್ನು ಹಾಗೂ ಎಲ್ಲಾ ಪದಾಧಿಕಾರಿಗಳನ್ನು ವೇದಿಕೆಗೆ ಆಹ್ವಾನಿಸಿದರು. ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀಮತಿ ಕೃಷ್ಣ ಕುಮಾರಿಯವರು ಓದಿದರು.

ಅನುಮೋದನೆ : ಶ್ರೀಮತಿ ಪ್ರತಿಮಾ, ದಾಬಸ್ ಪೇಟೆ ಹಾಗೂ
ಶ್ರೀಮತಿ ವೀಣಾ ಸತೀಶ್, ಬೆಂಗಳೂರು

ದೃಢೀಕರಣ : ಶ್ರೀಮತಿ ಕಮಲ ಎಂ., ಟಿ.ನರಸಿಪುರ
ಶ್ರೀಮತಿ ಲಕ್ಷ್ಮಿ, ಬೆಂಗಳೂರು.

ಖಜಾಂಚಿ ಶ್ರೀಮತಿ ಶ್ರೀ ವಿದ್ಯಾರವರು ವಾರ್ಷಿಕ ಲೆಕ್ಕಪತ್ರದ ವರದಿಯನ್ನು ಸಭೆಗೆ ಮಂಡಿಸಿದರು.

ಅನುಮೋದನೆ : ಶ್ರೀಮತಿ ಉಷಾಬಾಬು, ಟಿ.ನರಸಿಪುರ
ಶ್ರೀಮತಿ ಸಂಧ್ಯಾ ಜಗದೀಶ್, ಬೆಂಗಳೂರು

ದೃಢೀಕರಣ : ಶ್ರೀಮತಿ ಶಾಂತಕುಮಾರಿ, ಬೆಂಗಳೂರು.
ಶ್ರೀಮತಿ ಸುಮಾ ಅನಂತ, ಚಿತ್ರದುರ್ಗ.

ನಂತರ ಅಧ್ಯಕ್ಷರು ಎಲ್ಲಾ ಮಾಜಿ ಅಧ್ಯಕ್ಷರಿಗೆ ಗೌರವ ಸಮರ್ಪಣೆ ಮಾಡಿದರು. ಶ್ರೀಮತಿ ಗೋಕುಲಾ ಚಲಪತಿಯವರು ಅಧ್ಯಕ್ಷರಾದ ಶ್ರೀಮತಿ ಸುಧಾ ಮೂರ್ತಿಯವರ ಚಟುವಟಿಕೆಗಳನ್ನು ಪ್ರಶಂಸಿಸಿದರು. ಶ್ರೀಮತಿ ಕೃಷ್ಣಕುಮಾರಿಯವರು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ನಂತರ ಅಧ್ಯಕ್ಷರು ಎಲ್ಲಾ ದಾನಿಗಳಿಗೆ ಗೌರವ ಸಮರ್ಪಣೆಯನ್ನು ಮಾಡಿದರು.

## ಕ್ಷೇಮನಿಧಿ ಕಾರ್ಯಕ್ರಮ

ಶ್ರೀಮತಿ ವಿಜಯ ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ವಾಸವಿ ಮಹಿಳಾ ಕ್ಷೇಮನಿಧಿ ಟ್ರಸ್ಟ್‌ನ ಕಾರ್ಯಕ್ರಮವು ಪ್ರಾರಂಭವಾಯಿತು. ಅಧ್ಯಕ್ಷರು ಎಲ್ಲಾ ಟ್ರಸ್ಟಿಗಳನ್ನು ದಾನಿಗಳನ್ನು ಪದಾಧಿಕಾರಿಗಳನ್ನು ಸ್ವಾಗತಿಸಿದರು. ನಂತರ ಕ್ಷೇಮ ನಿಧಿಯ ವಿತರಣಾ ಕಾರ್ಯಕ್ರಮವು ನಡೆಯಿತು.

## ಚುನಾವಣೆ

ಅಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರು ಎಲ್ಲಾ ಮಾಜಿ ಅಧ್ಯಕ್ಷರನ್ನು, ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರನ್ನು, ಹಾಗೂ ಚುನಾವಣಾಧಿಕಾರಿಗಳಾಗಿ ಬಂದಂತಹ ಶ್ರೀಮಾನ್ ಆರ್.ಬಿ. ಚಂದ್ರಗುಪ್ತಾರವರನ್ನು ಸ್ವಾಗತಿಸಿದರು. ನಂತರ ವಕೀಲರಾದ ಶ್ರೀಮಾನ್ ಆರ್.ಬಿ. ಚಂದ್ರಗುಪ್ತಾರವರನ್ನು ಚುನಾವಣಾ ಪ್ರಕ್ರಿಯೆಯನ್ನು ನಡೆಸುವಂತೆ ವಿನಂತಿಸಿಕೊಳ್ಳಲಾಯಿತು. ವಕೀಲರು ಬೈಲಾ ಪ್ರಕಾರ 8'ಎ'ನಲ್ಲಿ ಸೂಚಿಸಿರುವಂತೆ ಚುನಾಯಿತರಾದ ಕಾರ್ಯಕಾರಿ ಸಮಿತಿಯ ಸದಸ್ಯರು ಚುನಾವಣೆಯ ಮೂಲಕ ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷಿಣಿಯಾಗಿ ನೇಮಿಸುವ ಹಕ್ಕನ್ನು ಹೊಂದಿರುತ್ತಾರೆ ಎಂದರು. ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರು ಒಮ್ಮತವಾಗಿ ಶ್ರೀಮತಿ ಉಮಾ ಸಾಯಿರಾಮ್ ರವರ ಹೆಸರನ್ನು ಎಲ್ಲಾ ಸದಸ್ಯರು ಸೂಚಿಸಿದರು.

ಚುನಾವಣಾಧಿಕಾರಿಗಳು ಮತ್ತೊಮ್ಮೆ ಎಲ್ಲರ ಒಪ್ಪಿಗೆ ಕೇಳಿ ಶ್ರೀಮತಿ ಉಮಾಸಾಯಿರಾಮ್‌ರವರನ್ನು 2024-26ರ ಅಧ್ಯಕ್ಷಿಣಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ಅಧ್ಯಕ್ಷಿಣಿಯವರಾದ ಶ್ರೀಮತಿ ಸುಧಾಮೂರ್ತಿಯವರು ವಕೀಲರಾದ ಶ್ರೀಮಾನ್ ಆರ್.ಬಿ. ಚಂದ್ರಗುಪ್ತಾರವರಿಗೆ ಧನ್ಯವಾದಗಳನ್ನು ತಿಳಿಸಿ ಗೌರವ ಸಮರ್ಪಣೆಯನ್ನು ಮಾಡಿದರು. ಶ್ರೀಮತಿ ಉಮಾ ಸಾಯಿರಾಮ್‌ರವರಿಗೆ ಶಾಲು, ಹಾರ ಹಾಕಿ ಅಭಿನಂದಿಸಿದರು. ಎಲ್ಲರಿಗೂ ಅಭಿನಂದನೆಗಳ ಸುರಿಮಳೆಯಾಯಿತು.

## ಸಮರೋಪ ಸಮಾರಂಭ

ಸಂಜೆ 4 ಗಂಟೆಗೆ ಸಮರೋಪ ಸಮಾರಂಭವು ಶ್ರೀಮತಿ ಸುಪ್ರೀತ ಕಾರ್ತಿಕ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಮುಖ್ಯ ಅತಿಥಿಯಾಗಿ ಫಿಟ್ ಇಂಡಿಯಾ ಅಂಬಾಸಿಡರ್ ವನಿತಾ ಅಶೋಕ ಅವರು ಆಗಮಿಸಿದ್ದರು. ಇವರು ತಮ್ಮ ಭಾಷಣದಲ್ಲಿ ಹೆಲ್ತ್ ಅಂಡ್ ಫಿಟ್‌ನೆಸ್ ಬಗ್ಗೆ ಹೇಳುತ್ತಾ ಆರೋಗ್ಯವು ಎಷ್ಟು ಮುಖ್ಯವೋ ಅಷ್ಟೆ ವ್ಯಾಯಾಮವು ಮುಖ್ಯ. ಎಲ್ಲರೂ ದಿನಾ ಒಂದು ಗಂಟೆ ವ್ಯಾಯಾಮ ಮತ್ತು ವಾಕಿಂಗ್ ಮಾಡಬೇಕು ಎಂದರು. ಅಧ್ಯಕ್ಷರು ಇವರನ್ನು ಗೌರವ ಸಮರ್ಪಣೆ ಮಾಡಿದರು. ವಿವಿಧ ಕ್ಷೇತ್ರಗಳನ್ನು ಸಾಧನೆ ಮಾಡಿರುವಂತಹ ಶ್ರೀಮತಿ ರಾಧಿಕಾ ಜಗದೀಶ್, ಶ್ರೀಮತಿ ಲಕ್ಷ್ಮೀ ಪಾಂಡುರಂಗ, ಶ್ರೀಮತಿ ವಿದ್ಯಾ ಮುರಳೀಧರ್, ಶ್ರೀಮತಿ ಗಿರಿಜಾ ನವೀನ್ ಮತ್ತು ಶ್ರೀಮತಿ

ಹರ್ಷಿಣಿ ವೆಂಕಟೇಶ್, ಶ್ರೀಮತಿ ವಿಜಯಲಕ್ಷ್ಮಿ ಆರು ಜನರನ್ನು ಗುರುತಿಸಿ ಪ್ರತಿಭಾನ್ವಿತ ಮಹಿಳೆಯರೆಂದು ಸನ್ಮಾನಿಸಿದರು. ನಂತರ ಅಧ್ಯಕ್ಷರನ್ನು ಎಲ್ಲಾ ರೀತಿಯಲ್ಲೂ ಸಹಾಯ ಮಾಡಿರುವಂತಹ ಶ್ರೀಮತಿ ಅರುಣಾ ಸಿರಿಗೇರಿ, ಶ್ರೀಮತಿ ಶ್ರೀವಿದ್ಯಾ, ಶ್ರೀಮತಿ ಶಕುಂತಲಾ, ಶ್ರೀಮತಿ ಕೆ.ಆರ್. ಸುಧಾ, ಶ್ರೀಮತಿ ಮಿ.ರಾ. ಶ್ರೀಮತಿ ಎನ್.ಎಸ್. ಪದ್ಮ ಏಳು ಜನರಿಗೆ ಸನ್ಮಾನಿಸಿದರು. ಶಿವಮೊಗ್ಗದಿಂದ ಬಂದ 5 ಜನ ಡೊಳ್ಳು ಕುಣಿತದವರಿಗೆ ಸನ್ಮಾನಿಸಲಾಯಿತು. ಅದೇ ದಿನ ಬೆಳಿಗ್ಗೆ ನಡೆದ ವಾಸವಿ ರಥಯಾತ್ರೆಯಲ್ಲಿ ವಾಸವಿ ದೇವಿಯ ಫೋಟೊ ಅಲಂಕಾರ ಸ್ಪರ್ಧೆಗೆ ಮೂರು ಬಹುಮಾನ ಹಾಗೂ ಬ್ಯಾನರ ಪ್ರದರ್ಶನಕ್ಕೆ ಸ್ಪರ್ಧೆಗೆ 3 ಬಹುಮಾನ ಹಾಗೂ ಮೊದಲು ಬಂದು ನೋಂದಣಿ ಮಾಡಿಸಿರುವ 5 ಮಂಡಳಿಗಳಿಗೆ ಬಹುಮಾನ ನೀಡಲಾಯಿತು.

ನಮ್ಮ ಸಂಸ್ಥೆಗೆ ಒಬ್ಬರು 10 ಜನ ಅಜೀವ ಸದ್ಯರನ್ನು ಮಾಡಿಸಿರುವವರಿಗೆ ಒಂದು ಬೆಳ್ಳಿ ಕಾಯಿನ್ (5 ಗ್ರಾಮ್)ನ್ನು ಬಹುಮಾನದ ರೂಪದಲ್ಲಿ 6 ಜನ ಸದಸ್ಯರಿಗೆ ಕೊಡಲಾಯಿತು. ಶೀ ಫಾರ್ ಸೊಸೈಟಿಯವರು ನಡೆಸಿದಂತಹ ಬೈಕ್ ರ‍್ಯಾಲಿಯ 10 ಜನ ಮಹಿಳೆಯರಿಗೆ ಸನ್ಮಾನಿಸಲಾಯಿತು. ವಾರ್ಷಿಕ ವರದಿಯನ್ನು ಕಳುಹಿಸಿರುವ 18 ಮಂಡಳಿಗಳಿಗೆ ಬಹುಮಾನಗಳನ್ನು ನೀಡಲಾಯಿತು. 20 ಜನ ವಾಲೆಂಟರ್ಸ್‌ಗಳನ್ನು ಕರೆದು ತಂದು ಗಜಲಕ್ಷ್ಮಿಯವರನ್ನು ಮತ್ತು ಎಂ.ಸಿ. ಮಾಡಿರುವಂತಹ ನಾಗರತ್ನ ವೆಂಕಟೇಶ್‌ರವರಿಗೆ ಸನ್ಮಾನಿಸಲಾಯಿತು. ಹಾಗೆಯೇ 15 ಜನ ಮಕ್ಕಳನ್ನು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕರೆದುಕೊಂಡು ಬಂದಂತಹ ಶೋಭಾರಾಣಿಯವರಿಗೆ ಸನ್ಮಾನಿಸಲಾಯಿತು. 2024–26ರ ಅಧ್ಯಕ್ಷರಾಗಿ ಚುನಾಯಿತರಾದ ಶ್ರೀಮತಿ ಉಮಾ ಸಾಯಿರಾಮ್‌ರವರಿಗೆ ಸಭೆಗೆ ಪರಿಚಯಿಸಿ ಲಾಂಛನವನ್ನು ಹಾಕುವ ಮೂಲಕ ತಮ್ಮ ಸ್ಥಾನವನ್ನು ಹಸ್ತಾಂತರಿಸಿದರು.

ಹತ್ತು ಮಂಡಳಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ನಂತರ ಶ್ರೀಮತಿ ಕೃಷ್ಣಕುಮಾರಿಯವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಇದೇ ದಿನ ನಡೆದಂತಹ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದ ಸಂಘಗಳು.**

**I. ಮೊದಲು ಬಂದು ನೋಂದಣಿ ಮಾಡಿದಂತಹ 5 ಸಂಘಗಳು:**

1. ಚಿನ್ಮಯಿ ವಾಸವಿ ಮಹಿಳಾ ಮಂಡಳಿ, ಪದ್ಮನಾಭನಗರ.
2. ಸಿರಿ ವಾಸವಿ ಮಹಿಳಾ ಮಂಡಳಿ, ಉತ್ತರಹಳ್ಳಿ.
3. ವಾಸವಿ ಮಹಿಳಾ ಮಂಡಳಿ, ಶಿವಮೊಗ್ಗ.
4. ಕುಸುಮಪುತ್ರಿ ವಾಸವಿ ಮಹಿಳಾ ಮಂಡಳಿ, ಉತ್ತರಹಳ್ಳಿ.
5. ವಾಸವಿ ಮಹಿಳಾ ಮಂಡಳಿ ಕೋಣನಕುಂಟೆ.

**II. ಶ್ರೀ ವಾಸವಿ ಮಾತೆ photo decoration ಸ್ಪರ್ಧೆ:**

1. ಶ್ರೀಮತಿ. ನಯನ ನಾಗೇಂದ್ರ.
2. ಶ್ರೀಮತಿ. ರಾಧಾ ಶುಭಕರ್.
3. ಕುಮಾರಿ ಶಿರೀಶಾ.

**III. ಬ್ಯಾನರ್ ಪ್ರೆಸೆಂಟೇಷನ್ ಸ್ಪರ್ಧೆ:**

1. ವಾಸವಿ ಮಹಿಳಾ ಮಂಡಳಿ, ಶಿವಮೊಗ್ಗ.
2. ವಾಸವಿ ಮಹಿಳಾ ಮಂಡಳಿ, ಶ್ರೀರಾಂಪುರ.
3. ವಾಸವಿ ಮಹಿಳಾ ಮಂಡಳಿ ಕೋಣನಕುಂಟೆ.

## 43ನೇ ವರ್ಷದ ರಾಜ್ಯಮಟ್ಟದ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆ ತುಣುಕುಗಳು
















43ನೇ ವರ್ಷದ ರಾಜ್ಯ ಮಟ್ಟದ ವಾರ್ಷಿಕೋತ್ಸವ ಸಮಾರಂಭ










43ನೇ ವರ್ಷದ ರಾಜ್ಯ ಮಟ್ಟದ ವಾರ್ಷಿಕೋತ್ಸವ ಸಮಾರಂಭ
43




43ನೇ ವರ್ಷದ ರಾಜ್ಯ ಮಟ್ಟದ ವಾರ್ಷಿಕೋತ್ಸವ ಸಮಾರಂಭ
YOU CAN
OWN A PERIMETER
Open For Franchise
"NATION WIDE"
43
Date: 03-08-2024

## Contribution from EC Members

| NAME | AMOUNT |
|---|---|
| Nagarathna Gowrishankar | 5000 |
| Sudha Murthy | 5000 |
| Aruna Sirigeri | 5000 |
| Shree Vidya. M | 5000 |
| Shakunthala.V.S | 5000 |
| Jayanthi Nagraj | 1000 |
| Niveditha Murthy | 1000 |
| Uma Sairam | 1000 |
| Alamelu S Prasad | 5000 |
| Vani Ramesh | 1000 |
| Girija R Rajgopal | 2000 |
| Vijaya Subramanyam | 1000 |
| Mayura Sreeram | 2000 |
| Vijaya Puttaraju | 1000 |
| Chethana Lavakumar | 1000 |
| Lalitha P J | 5000 |
| Padma R S | 5000 |
| Jayanthi Natraj | 2000 |
| Sheela Suresh | 1000 |
| Usha Venkatesh | 1000 |
| Geetha devi | 1000 |
| Rathnamala | 1000 |
| Meenakshi Natraj | 1000 |
| Shobha Bhavani | 500 |
| Usha Gupta | 1000 |
| S Lakshmi Lakshmi Narayan | 2000 |
| Anuradha | 1000 |
| Krishna Kumari | 1000 |
| Shantha Kumari | 1000 |
| Gokula Chalapathi | 1000 |
| Sudha .K. R. | 1000 |
| Pushpavati.K.C | 1000 |
| Manjula | 1000 |
| Supreetha Karthik | 1000 |
| Deepa raman | 1000 |
| R.V.Sunitha | 1000 |
| Sudha Nagraj, Davangere | 1000 |
| Shobha rani | 1000 |
| Shilpa Nagendra | 1000 |
| Suma Nagaraj | 1000 |
| Latha Balaji | 1000 |
| Lalitha Nagesh | 1000 |
| Nirmala.A.V | 1000 |

| Donors & Sponsors for AGM |
|---|
| **50,000** |
| Karnataka Arya Vysya Mahasabha |
| **25,000** |
| Sri Ganapathi Jewellers, Jayanagar |
| Wondr Diamonds, Jayanagar |
| **10,000** |
| Meda Sridhar |
| Nagmahesh |
| MuraliKrishna (Eshwari silver photos) |
| L.R.Somesh (Vasavi Kannika Chits) |
| K.R.Krishna |
| **7,000** |
| R.K.Pan Bhandar |
| **5,000** |
| Define chits pvt ltd |
| Nagamani. (ulsoor) |
| Sathyanarayan Babu.K.V |
| Shabarish (yuthwing) |
| N.S.Srinivas Murthy |
| Sandeep (Kannika Bangle store) |
| Arjun Souharda Credit Cooperative |
| **3,000** |
| Girija Sathya murthy |
| **2,500** |
| Jayanna |
| **2,000** |
| Radha prakash (ulsoor) |
| Vidya Murali |
| Pavithra |
| |
| **Other Donors** |
| Sri Bhagyalakshmi Enterprises |
| Pannaga Events & Decorations |
| Nishchith Silks & Sarees - 3 Sarees |
| Shringar Sarees - 3 Sarees |
| Jai Shankar Saree Palace - 14 Sarees |
| Mr. Suresh, Chaithanya Coffee works - 300 coffee packs |
| Ashika incense inc. - special agarbatthi |
| Kandalaa House of Jewellery - 100 bags |
| Perimeter - 15 Gift Baskets |
| |
| **Stalls** |
| Kavitha / Siri Jewellers - 8000 |
| Bheemas - 5000 |
| S Subhashini - 5000 |
| Vani - 3500 |
| Dr. Manasa Sandeep - 2000 |
| Shirisha - 2000 |
| SNN Masala products - 5000 |
| Paraspara Shekar - 3500 |
| Sujatha - 5000 |
| Sinchana - 4000 |
| Twinkle - 4000 |
| Jyothi - 4000 |

## ಪ್ರತಿಭಾ ಪುರಸ್ಕಾರ

| SSLC |
|---|
| Omyaasree Balaji |
| Hasini S A |
| Samhitha M M |
| Bhuvi Narayan R |
| Maanya B Shekar |
| **II PUC** |
| Anusha A.N |
| Saanvi S |
| Nagalikhitha G D |
| Trisha K B |
| Bhanupriya. M.N |
| Pavani G K |
| Priyanka P G |
| R PRAKRUTHI |
| Srisha S S |
| Ramya Shree S |
| Shravya.C.B. |
| K V Thanu Shree |
| Sai Tejashwini RS |
| Dhatri P Sriram |
| Keerthana Gowri P S |
| Aishwarya B |
| Surabhi G S |
| **Degree** |
| SIRISHA P G |
| Pranathi D S |
| Sahana Javalagiri |
| Shruthika B.A |
| Sarika P M |
| Dr. P S Shivani |
| Impana N C |
| Sirisha K N |

### ಮಂಡಳಿಗಳ ವರದಿಗಳನ್ನು ಕಳುಹಿಸಬೇಕಾದ ಕೊನೆಯ ದಿನಾಂಕ

| | | |
|---|---|---|
| 1. | ಮಾರ್ಚ್ ಪತ್ರಿಕೆಗೆ | ಫೆಬ್ರವರಿ 10ನೇ ತಾರೀಖು |
| 2. | ಜೂನ್ ಪತ್ರಿಕೆಗೆ | ಮೇ 10ನೇ ತಾರೀಖು |
| 3. | ಸೆಪ್ಟೆಂಬರ್ ಪತ್ರಿಕೆಗೆ | ಆಗಸ್ಟ್ 10ನೇ ತಾರೀಖು |
| 4. | ಡಿಸೆಂಬರ್ ಪತ್ರಿಕೆಗೆ | ನವೆಂಬರ್ 10ನೇ ತಾರೀಖು |

### ಮೊಡವೆ ನಿವಾರಣೆಗೆ ಸಲಹೆಗಳು

ಪ್ರತಿದಿನ ಬೆಳಗ್ಗೆ ಎದ್ದ ನಂತರ ಒಂದು ಲೋಟ ಉಗುರು ಬೆಚ್ಚಗಿನ ನೀರಿಗೆ ಜೇನುತುಪ್ಪ ಹಾಗೂ ನಿಂಬೆರಸವನ್ನು ಸೇರಿಸಿ ಕುಡಿಯಬೇಕು. ಹಾಲಿನಲ್ಲಿ ತೇಯ್ದ ಜಾಯಿಕಾಯಿಯನ್ನು ಮೊಡವೆಗಳಮೇಲೆ ಲೇಪಿಸಿ, ಪ್ರತಿದಿನ ಮಲಗುವ ಮುನ್ನ ಪುದೀನ ರಸ ಅಥವ ತುಳಸಿ ರಸವನ್ನು ಮುಖಕ್ಕೆ ಲೇಪಿಸಿ ಬೆಳಿಗ್ಗೆ ಎದ್ದು ತಣ್ಣೀರಿನಿಂದ ಮುಖ ತೊಳೆಯಿರಿ. ಇದರಿಂದ ಮೊಡವೆಗಳು ಮತ್ತು ಅದರಿಂದ ಬಂದ ಕಲೆಗಳು ಕೂಡ ಕಡಿಮೆಯಾಗುತ್ತವೆ. ಜೀರಿಗೆಯನ್ನು ಪೇಸ್ಟ್ ಮಾಡಿ ಮೊಡವೆಗಳಿಗೆ ಲೇಪಿಸಿದರೆ ಮೊಡವೆಗಳು ಕ್ರಮೇಣ ಕಡಿಮೆಯಾಗುತ್ತವೆ. ಕಡಲೆ ಹಿಟ್ಟು, ನಿಂಬೆರಸ, ಅರಿಶಿಣ ಮತ್ತು ಜೇನುತುಪ್ಪವನ್ನು ಮುಖಕ್ಕೆ ಲೇಪಿಸುವುದರಿಂದ ಮುಖದ ಕಾಂತಿ ಹೆಚ್ಚಾಗುವುದಲ್ಲದೆ ಮೊಡವೆಗಳು ಮಾಯವಾಗುತ್ತವೆ. ಅಲೋವೇರಾ ರಸವನ್ನು ಮುಖಕ್ಕೆ ಹಚ್ಚಿದರೆ ಮೊಡವೆಗಳ ಗುಣ ಮುಖತೆಗೆ ಸಹಾಯ ಮಾಡುತ್ತದೆ. ದಿನಕ್ಕೆ 5 ರಿಂದ 6ಬಾರಿ ಮುಖತೊಳೆಯುವುದು ಉತ್ತಮ. ಮುಖ ದೂಷಿಕರಹ ಲೇಪ ಇನ್ನು ಮುಂತಾದ ರಕ್ತ ಶುದ್ಧೀಕರಣ ಮಾಡುವ ಔಷಧಗಳನ್ನು ವೈದ್ಯರ ಸಲಹೆಯ ಮೇಲೆ ತೆಗೆದುಕೊಳ್ಳುವುದು ಉತ್ತಮ. ಉಪ್ಪು, ಖಾರದ ಬಳಕೆ ಕಡಿಮೆ ಮಾಡಿ ಹಾಗೂ ಸಾಕಷ್ಟು ಹಣ್ಣು, ತರಕಾರಿಗಳು ಮತ್ತು ನೀರಿನ ಬಳಕೆ ಮಾಡುವುದರಿಂದ ತ್ವಚೆಯನ್ನು ಕಾಂತಿಯುತವಾಗಿ ಹಾಗು ಆರೋಗ್ಯವಂತವಾಗಿ ಕಾಪಾಡಿಕೊಳ್ಳಬಹುದು.

– **ಡಾ. ಲಲಿತಾ ಕುರ** ಬಿ.ಎ.ಎಂ.ಎಸ್., ಎಂ.ಡಿ. (ಮೊ:8310401782)

## ವಾರ್ಷಿಕ ವರದಿ ಬಹುಮಾನ ವಿತರಣೆ

| ಸಂ. | ಸ್ಥಳ | ಬಹುಮಾನ | ಕಾರ್ಯಕ್ರಮ |
|---|---|---|---|
| 1 | ಶಿವಮೊಗ್ಗ | ಮೊದಲನೆಯ | ಧಾರ್ಮಿಕ ಕಾರ್ಯಕ್ರಮ |
| | | ಸಮಾಧಾನಕರ | ಆರ್ಥಿಕ ಕಾರ್ಯಕ್ರಮ |
| 2 | ಕೋಣನಕುಂಟೆ | ಎರಡನೆಯ | ಧಾರ್ಮಿಕ ಕಾರ್ಯಕ್ರಮ |
| | | ಎರಡನೆಯ | ಸಾಂಸ್ಕೃತಿಕ ಕಾರ್ಯಕ್ರಮ |
| 3 | ಮಧುಗಿರಿ | ಸಮಾಧಾನಕರ | ವೈವಿಧ್ಯಮಯ |
| | | ಮೊದಲನೆಯ | ಸೇವಾ ಕ್ಷೇತ್ರ |
| 4 | ಉತ್ತ್ರಹಳ್ಳಿ | ಮೂರನೆಯ | ಧಾರ್ಮಿಕ ಕಾರ್ಯಕ್ರಮ |
| | | ಮೂರನೆಯ | ಸೇವಾ ಕ್ಷೇತ್ರ |
| 5 | ಚಿತ್ರದುರ್ಗ | ಸಮಾಧಾನಕರ | ಧಾರ್ಮಿಕ ಕಾರ್ಯಕ್ರಮ |
| | | ಮೊದಲನೆಯ | ಶೈಕ್ಷಣಿಕ ಕಾರ್ಯಕ್ರಮ |
| | | ಎರಡನೆಯ | ಆರ್ಥಿಕ ಕಾರ್ಯಕ್ರಮ |
| 6 | ಹೊಸದುರ್ಗ | ಮೊದಲನೆಯ | ಸಾಂಸ್ಕೃತಿಕ ಕಾರ್ಯಕ್ರಮ |
| | | ಎರಡನೆಯ | ವರದಿ ಪ್ರಸ್ತುತಿ |
| 7 | ಮಾಗಡಿ | ಮೂರನೆಯ | ವರದಿ ಪ್ರಸ್ತುತಿ |
| | | ಮೊದಲನೆಯ | ವೈವಿಧ್ಯಮಯ |
| 8 | ಕುಶಾಲನಗರ | ಮೊದಲನೆಯ | ವರದಿ ಪ್ರಸ್ತುತಿ |
| | | ಎರಡನೆಯ | ಆರೋಗ್ಯ ಕ್ಷೇತ್ರ |
| | | ಸಮಾಧಾನಕರ | ಶೈಕ್ಷಣಿಕ ಕಾರ್ಯಕ್ರಮ |
| 9 | ಮಲ್ಲೇಶ್ವರಂ | ಎರಡನೆಯ | ಸೇವಾ ಕ್ಷೇತ್ರ |
| | | ಎರಡನೆಯ | ಸಾಮಾಜಿಕ ಕಾರ್ಯಕ್ರಮ |
| 10 | ಟಿ.ನರಸೀಪುರ | ಮೂರನೆಯ | ಆರೋಗ್ಯ ಕ್ಷೇತ್ರ |
| 11 | ಶಿಡ್ಲಘಾಟ್ | ಮೊದಲನೆಯ | ಆರೋಗ್ಯ ಕ್ಷೇತ್ರ |
| | | ಸಮಾಧಾನಕರ | ಸಾಮಾಜಿಕ ಕಾರ್ಯಕ್ರಮ |
| 12 | ಗಂಗಾವತಿ | ಎರಡನೆಯ | ವೈವಿಧ್ಯಮಯ |
| | | ಮೂರನೆಯ | ಸೇವಾ ಕ್ಷೇತ್ರ |
| 13 | ಕೊಂಟೋಂಮೆಂಟ್ | ಸಮಾಧಾನಕರ | ಧಾರ್ಮಿಕ ಕಾರ್ಯಕ್ರಮ |
| | | ಎರಡನೆಯ | ಶೈಕ್ಷಣಿಕ ಕಾರ್ಯಕ್ರಮ |
| | | ಮೂರನೆಯ | ಸಾಮಾಜಿಕ ಕಾರ್ಯಕ್ರಮ |
| | | ಮೂರನೆಯ | ಆರ್ಥಿಕ ಕಾರ್ಯಕ್ರಮ |
| 14 | ಗೌರಿಬಿದನೂರ | ಸಮಾಧಾನಕರ | ಸೇವಾ ಕ್ಷೇತ್ರ |
| 15 | ವಿಜಯನಗರ | ಮೂರನೆಯ | ಶೈಕ್ಷಣಿಕ ಕಾರ್ಯಕ್ರಮ |
| | | ಎರಡನೆಯ | ಸೇವಾ ಕ್ಷೇತ್ರ |
| 16 | ಪದ್ಮನಾಭನಗರ | ಮೊದಲನೆಯ | ಆರ್ಥಿಕ ಕಾರ್ಯಕ್ರಮ |
| | | ಎರಡನೆಯ | ಸಾಮಾಜಿಕ ಕಾರ್ಯಕ್ರಮ |
| 17 | ವಿ.ವಿ. ಪುರಂ | ಎರಡನೆಯ | ಶೈಕ್ಷಣಿಕ ಕಾರ್ಯಕ್ರಮ |
| | | ಮೂರನೆಯ | ಸೇವಾ ಕ್ಷೇತ್ರ |
| 18 | ಸಂಪಂಗಿ ರಾಮನಗರ | ಮೊದಲನೆಯ | ಸಾಮಾಜಿಕ ಕಾರ್ಯಕ್ರಮ |
| | | ಮೂರನೆಯ | ಸಾಂಸ್ಕೃತಿಕ ಕಾರ್ಯಕ್ರಮ |

## ಶ್ರದ್ಧಾಂಜಲಿ



ಶ್ರೀಮತಿ ನಾಗರತ್ನಮ್ಮ ಗೌರಿ ಶಂಕರ್
ಜನನ : 01.07.1940
ಮರಣ : 03.10.2024

ತಂದೆ–ತಾಯಿಯ ಪ್ರೀತಿಯ ಮಗಳಾಗಿ, ಪ್ರೀತಿಯ ಮಡದಿಯಾಗಿ ತಾಯಿಯಾಗಿ, ಅಜ್ಜಿಯಾಗಿ, ಮುತ್ತಜ್ಜಿಯಾಗಿ, ಒಳ್ಳೆಯ ಸ್ನೇಹಿತೆಯಾಗಿ ತುಂಬು ಜೀವನ ನಡೆಸಿದವರು. ಇವರು ತುಂಬಾ ಶ್ರೀಮಂತರಾಗಿದ್ದರೂ ಸರಳ ಜೀವನವನ್ನು ನಡೆಸಿದವರು, ಸ್ನೇಹಮಯಿಯಾಗಿ ಇದ್ದವರು. ಆರ್ಯವೈಶ್ಯ ಮಹಿಳೆಯರ ಮತ್ತು ಮಕ್ಕಳ ಏಳಿಗೆಗಾಗಿ ರಾಜ್ಯ ಮಟ್ಟದ ಮಹಿಳಾ ವಿಭಾಗವನ್ನು ರಚಿಸಲು ನಿಶ್ಚಯಿಸಿ ಎಲ್ಲರ ಸಹಕಾರದೊಂದಿಗೆ 'ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ' ಸ್ಥಾಪಿಸಿ ಅದರ ಪ್ರಥಮ ಅಧ್ಯಕ್ಷರಾಗಿ 1981ರ ಜುಲೈನಲ್ಲಿ ಸ್ಥಾಪಿಸಿದರು. ಶ್ರೀಮತಿ ನಾಗರತ್ನಮ್ಮನವರು ತಮ್ಮ ಅಧ್ಯಕ್ಷಣೆಯಾದ ಸಮಯದಲ್ಲಿ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಅತ್ಯಂತ ಪ್ರಮುಖ ವಿಚಾರ 'ಪತಿಯ ದೈವಾಧೀನದ ನಂತರ ಮಹಿಳೆಯರು ಮಂಗಳ ದ್ರವ್ಯಗಳನ್ನು ತೆಗೆಯುವ ನಡವಳಿಕೆಯನ್ನು ಪ್ರತಿಭಟಿಸಿದರು. ಇದಕ್ಕಾಗಿ ಸತತ ಎರಡು ವರ್ಷಗಳ ಕಾಲ ಗುರು ಹಿರಿಯರನ್ನು, ಮಠಾಧಿಪತಿಗಳನ್ನು ಸಂಪರ್ಕಿಸಿ ಅವರ ಸಮ್ಮತಿಯೊಡನೆ 10ನೇ ದಿನದ ಕಾರ್ಯಕ್ರಮ ನಿಷೇಧಿಸಿದರು. ಇವರ ಅವಧಿಯಲ್ಲೇ ಪ್ರತಿವರ್ಷ ಅಖಂಡ ಭಜನೆ, ಸರ್ವ ಸದಸ್ಯರ ಸಭೆ, ಸಮ್ಮೇಳನ, ಸಮಾವೇಶ ನಡೆಸಿದರು. ತ್ರೈಮಾಸಿಕ ಪತ್ರಿಕೆ 'ಪ್ರತಿಭಾ ಕುಸುಮ"ವೂ ಪ್ರಾರಂಭವಾಯಿತು.

ವಾಸವೀ ಕ್ಷೇಮನಿಧಿ ಟ್ರಸ್ಟ್ ಅಂಗ ಸಂಸ್ಥೆಯನ್ನು ಸ್ಥಾಪಿಸಿ, ಮಕ್ಕಳ ವಿದ್ಯಾಭ್ಯಾಸಕ್ಕೆ, ಮಹಿಳಾ ಸ್ವ ಉದ್ಯೋಗಕ್ಕೆ ಧನ ಸಹಾಯ ಸಿಗುವಂತೆ ಮಾಡಿದರು. ಅನೇಕ ಶಿಬಿರಗಳನ್ನು ಮಾಡಿದರು. 1982ರಲ್ಲಿ ಆಂಧ್ರ, ತಮಿಳುನಾಡು, ಕೇರಳ, ಪಾಂಡಿಚೇರಿ, ಮಹಾರಾಷ್ಟ್ರದ ಮಹಿಳಾ ಮಂಡಲಿಗಳನ್ನು ಆಹ್ವಾನಿಸಿ 'ಅಖಿಲ ಭಾರತ ಆರ್ಯ ವೈಶ್ಯ ಮಹಿಳಾ ಸಮ್ಮೇಳನ' ಸ್ಥಾಪಿಸಿದರು. ಇದಕ್ಕೆ ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರು ಸ್ಥಾಪಕ ಅಧ್ಯಕ್ಷರಾದರು. ಮಹಿಳೆಯರಲ್ಲಿರುವ ಕಲೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹೊರತಂದು ಪ್ರೋತ್ಸಾಹಿಸುವ ಸಲುವಾಗಿ ರಾಜ್ಯಮಟ್ಟದಲ್ಲಿ ನಾಟ್ಯೋತ್ಸವ ಮತ್ತು ನಾಟಕೋತ್ಸವವನ್ನು 9 ದಿನಗಳ ಕಾಲ ಕೆ.ಪಿ. ಪುಟ್ಟಪ್ಪ ಚೆಟ್ಟಿ ಟೌನ್ ಹಾಲ್‌ನಲ್ಲಿ ನಡೆಸಿದರು. ಇದಕ್ಕೆ ಸುಮಾರು 14–15 ತಂಡಗಳು ಭಾಗವಹಿಸಿದ್ದವು. ಆಗಿನ ಕಾಲದಲ್ಲೇ ಇಷ್ಟೆಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿರುವುದು ಶ್ರೀಮತಿ ನಾಗರತ್ನಮ್ಮನವರ ಕಾರ್ಯದಕ್ಷತೆಯನ್ನು ತೋರಿಸುತ್ತದೆ. ಇವರು ನಮ್ಮನ್ನೆಲ್ಲಾ ಅಕ್ಟೋಬರ್ 3, 2024ರಂದು ಅಗಲಿದ್ದಾರೆ. ಇವರ ಸ್ಫೂರ್ತಿ ನಮ್ಮೆಲ್ಲರಿಗೂ ದಾರಿ ದೀಪವಾಗಿರಲಿ.



ಶ್ರೀಮತಿ ನಿರ್ಮಲಾ ನಂದಕುಮಾರ್

ಶ್ರೀಮತಿ ನಿರ್ಮಲಾ ನಂದಕುಮಾರ್ ಸ್ಥಾಪಕ ಪ್ರಧಾನ ಕಾರ್ಯದರ್ಶಿಯಾಗಿ ಆರ್ಯವೈಶ್ಯ ಮಹಿಳಾ ಮಹಾಸಭಾ ಸೇವೆ ಸಲ್ಲಿಸಿರುತ್ತಾರೆ.

ನಂತರ ಅಧ್ಯಕ್ಷರಾಗಿ, ಆಲ್ ಇಂಡಿಯಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ವೈಶ್ಯ ಜನಾಂಗದ ಕಣ್ಮಣಿಯಾಗಿ ಅನೇಕ ಸಂಘ ಸಂಸ್ಥೆಗಳಲ್ಲಿ ನಿಸ್ವಾರ್ಥವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಸೇವೆ ಸಲ್ಲಿಸಿ ಸಾರ್ಥಕ ಜೀವನ ಸಾಗಿಸಿರುತ್ತಾರೆ.

ನಮ್ಮನ್ನು ಅಗಲಿದ ಇವರಿಬ್ಬರ ಆತ್ಮಕ್ಕೆ ದೇವರು ಮುಕ್ತಿ ನೀಡಲೆಂದು ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ ವತಿಯಿಂದ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ.

# ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ (ರಿ)

# ಪದಗ್ರಹಣ ಸಮಾರಂಭ

ದಿನಾಂಕ 13.9.2024ನೇ ಶುಕ್ರವಾರ 11.30 ಗಂಟೆಗೆ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ, ಸಜ್ಜನ್‌ರಾವ್ ವೃತ್ತ, ವಿ.ವಿ.ಪುರಂ ಬೆಂಗಳೂರಿನಲ್ಲಿ ನಡೆಯಿತು. ಅಧ್ಯಕ್ಷತೆ ಶ್ರೀಮತಿ ಸುಧಾಮೂರ್ತಿ ರಾಜ್ಯಾಧ್ಯಕ್ಷರು ಅಖಿಲ ಕರ್ನಾಟಕ ಆರ್ಯ ವೈಶ್ಯ ಮಹಿಳಾ ಮಹಾಸಭಾ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ವಾಣಿ ನಾಗೇಂದ್ರ ಪ್ರಾರ್ಥನೆ ಹಾಡಿದರು. ನಂತರ ರಾಜ್ಯಾಧ್ಯಕ್ಷರು ಸ್ವಾಗತ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಆರ್.ಪಿ. ರವಿಶಂಕರ್ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷರು ಹಾಗೂ ಶ್ರೀಮತಿ ಗೀತಾ ರಾಮಮೂರ್ತಿ, ಅಖಿಲ ಭಾರತ ಆರ್ಯ ವೈಶ್ಯ ಮಹಿಳಾ ಮಹಾಸಭಾ, ಅಧ್ಯಕ್ಷರು ಆಗಮಿಸಿದ್ದರು.

ಪ್ರಧಾನ ಕಾರ್ಯದರ್ಶಿ ಶ್ರೀಮತಿ ಅರುಣ ಸಿರಿಗೆರೆ, ಕಾರ್ಯದರ್ಶಿ ವರದಿ ಸಭೆಗೆ ಮಂಡಿಸಿದರು. ಖಜಾಂಚಿ ಶ್ರೀಮತಿ ಶ್ರೀವಿದ್ಯಾ ಲೆಕ್ಕಪತ್ರ ವಿವರಣೆ ನೀಡಿದರು. ಪದಗ್ರಹಣ ಕಾರ್ಯಕ್ರಮ ಶ್ರೀಮತಿ ಸಿರೀಷಾ ಅವರ ಪ್ರಾರ್ಥನೆಯಿಂದ ಪ್ರಾರಂಭವಾಯಿತು. ಕಾರ್ಯಕ್ರಮದ ಉದ್ಘಾಟನೆ ಮುಖ್ಯ ಅತಿಥಿಗಳು ಹಾಗೂ ಮಾಜಿ ರಾಜ್ಯಾಧ್ಯಕ್ಷರುಗಳು ಹಾಗೂ ನೂತನ ರಾಜ್ಯಾಧ್ಯಕ್ಷಿಣಿಯಾದ ಶ್ರೀಮತಿ ಉಮಾ ಸಾಯಿರಾಂ ಹಾಗೂ ತಂಡದವರು ಮಾಡಿದರು. ನಂತರ ಪ್ರಮಾಣ ವಚನವನ್ನು ಮೊದಲನೆಯದಾಗಿ ಶ್ರೀಮತಿ ಉಮಾಸಾಯಿರಾಂ ಅವರು 17ನೇ ರಾಜ್ಯಾಧ್ಯಕ್ಷಿಣಿಯಾಗಿ ಸ್ವೀಕರಿಸಿದರು. ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಮತಿ ಸಂಧ್ಯಾ ಜಗದೀಶ್ ಖಜಾಂಚಿಯಾಗಿ ಶ್ರೀಮತಿ ವಿ.ಎಸ್. ಶಕುಂತಲ, ಪ್ರಧಾನ ಸಂಪಾದಕಿಯಾಗಿ ಶ್ರೀಮತಿ ಲತಾ ಶ್ರೀನಿವಾಸ್ ಪ್ರಮಾಣ ವಚನ ಸ್ವೀಕರಿಸಿದರು. ಹಿಂದಿನ ರಾಜ್ಯಾಧ್ಯಕ್ಷಿಣಿಯಾದ ಶ್ರೀಮತಿ ಸುಧಾಮೂರ್ತಿಯವರು ನೂತನ ತಂಡದ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಡೆಸಿಕೊಟ್ಟರು. ವಿಭಿನ್ನವಾಗಿ ದೀಪಗಳನ್ನು ಬೆಳಗಿಸಿ, ಬೆಳಕಿನ ಕಡೆ ಸಾಗುತ್ತೇವೆ ಎಂದು ಸಾಂಕೇತಿಕವಾಗಿ ಅನೇಕ ಸಂಘ ಸಂಸ್ಥೆಯ ಗಣ್ಯರು ಆಗಮಿಸಿ ಶುಭ ಕೋರಿದರು.

ಮುಖ್ಯ ಅತಿಥಿಗಳಾದ ಶ್ರೀ ಆರ್.ಪಿ. ರವಿಶಂಕರ್‌ರವರು ಅರ್ಥಪೂರ್ಣವಾದ ಜನಮನ ಮುಟ್ಟುವ ಕಾರ್ಯಕ್ರಮ ಮಾಡಿ ಎಂದು ಮಾರ್ಗದರ್ಶನ ನೀಡಿದರು. ಶ್ರೀಮತಿ ಗೀತಾ ರಾಮಮೂರ್ತಿ, ಅಖಿಲ ಭಾರತ ಆರ್ಯ ವೈಶ್ಯ ಮಹಿಳಾ ಮಹಾಸಭಾ, ಅಧ್ಯಕ್ಷರು ನೂತನ ರಾಜ್ಯಾಧ್ಯಕ್ಷರ ಯೋಜನೆಗಳನ್ನು ಉದ್ದೇಶಗಳನ್ನು ಶ್ಲಾಘಿಸಿದರು. ನೂತನ ರಾಜ್ಯಾಧ್ಯಕ್ಷರಾದ ಶ್ರೀಮತಿ ಉಮಾ ಸಾಯಿರಾಂ ಮುಂದಿನ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಸಮಾಜದ ಕಲ್ಯಾಣಕ್ಕಾಗಿ ಮಾಡುತ್ತೇವೆ ಎಂದು ಹೇಳಿದರು.

ವಿಶೇಷ ಆಹ್ವಾನಿತರಾಗಿ ಶ್ರೀ ಗೋವಿಂದರಾಜುಲು, ಅಧ್ಯಕ್ಷರು, ಪೆನಗೊಂಡ ಟ್ರಸ್ಟ್, ಶ್ರೀ ಐ.ಎಸ್. ಪ್ರಸಾದ್, ಕರ್ನಾಟಕ ಆರ್ಯ ವೈಶ್ಯ ಚಾರಿಟಬಲ್ ಟ್ರಸ್ಟ್, ಅಧ್ಯಕ್ಷರು, ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ಪ್ರಧಾನಕಾರ್ಯದರ್ಶಿ, ಶ್ರೀಮಾನ್ ಕೃಷ್ಣ ಅವರು, ಕಾರ್ಯಕಾರಿ ಸಮಿತಿ ಸದಸ್ಯರು, ಶ್ರೀ ಲವಕುಮಾರ್, ಬೆಂಗಳೂರು ಆರ್ಯ ವೈಶ್ಯ ಮಂಡಳಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗ ಮಹೇಶ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಕೆ.ಎಲ್. ನಟರಾಜ್, ಒಕ್ಕೂಟ ಸ್ಥಾಪಕ ಅಧ್ಯಕ್ಷರಾದ ಶ್ರೀ ವಿಜಯ ಸಮರ್ಥ ತುಮಕೂರಿನ ಎಸ್.ಆರ್. ಶ್ರೀಧರ್ ಮೂರ್ತಿ, ಮಾಜಿ ಅಧ್ಯಕ್ಷರು, ವೈಶ್ಯ ಕೋ-ಆಪರೇಟಿವ್ ಬ್ಯಾಂಕ್, ತುಮಕೂರು, ಶ್ರೀ ಟಿ.ಎನ್. ಅಶೋಕ್, ಅವೊಪಾದ ಕಾರ್ಯದರ್ಶಿಗಳು, ಬೆಂಗಳೂರು ಮಹಿಳಾ ಮಂಡಳಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ವತ್ಸಲ ಮದನ್, ಪ್ರಖ್ಯಾತ ವಾಸವಿ ಸಿಸ್ಟರ್ಸ್ ಇನ್ನೂ ಅನೇಕ ಗಣ್ಯರು ಆಗಮಿಸಿದ್ದರು.

